| C1 | ದಿನಾಂಕ : 27-10-2024 ಭಾನುವಾರ<br>ಒಟ್ಟು ಪ್ರಶ್ನೆಗಳು : 100 ಗರಿಷ್ಠ ಅಂಕಗಳು : 100<br>ಒಟ್ಟು ಅವಧಿ : 150 ನಿಮಿಷಗಳು<br>ಉತ್ತರಿಸಲು ಇರುವ ಗರಿಷ್ಠ ಅವಧಿ : 120 ನಿಮಿಷಗಳು<br>ಸಮಯ : ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.30 ರ ವರೆಗೆ | 1013961<br>ಕ್ರಮ ಸಂಖ್ಯೆ : |
|---|---|---|
| ವರ್ಷನ್ ಕೋಡ್ | ನಿಮ್ಮ ನೋಂದಣಿ ಸಂಖ್ಯೆಯನ್ನು ಬರೆಯಿರಿ<br>1 0 3 0 1 0 4 2 5 | ವಿಷಯ ಸಂಕೇತ: VAO2710P124 |

**ಮಾಡಿ:** **ವಿಷಯ: ಪತ್ರಿಕೆ-1**

1. ಕೊಠಡಿ ಮೇಲ್ವಿಚಾರಕರಿಂದ ಈ ಪ್ರಶ್ನೆ ಪತ್ರಿಕೆಯನ್ನು ನಿಮಗೆ ಎರಡನೆಯ ಬೆಲ್ ಬೆ. 10.25 ಆದ ನಂತರ ಕೊಡಲಾಗುತ್ತದೆ.
2. ಅಭ್ಯರ್ಥಿಗಳು ನೋಂದಣಿ ಸಂಖ್ಯೆಯನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಿದ್ದೀರೆಂದು ಖಾತ್ರಿಪಡಿಸಿಕೊಳ್ಳಿ.
3. ಪ್ರಶ್ನೆಪತ್ರಿಕೆಯ ವರ್ಷನ್ ಕೋಡ್ ಮತ್ತು ಕ್ರಮಸಂಖ್ಯೆಯನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಬೇಕು.
4. ಪ್ರಶ್ನೆಪತ್ರಿಕೆಯ ವರ್ಷನ್ ಕೋಡ್ ಮತ್ತು ಕ್ರಮಸಂಖ್ಯೆಯನ್ನು ನಾಮಿನಲ್ ರೋಲ್‌ನಲ್ಲಿ ತಪ್ಪಿಲ್ಲದೆ ಬರೆಯಬೇಕು.
5. ಓ.ಎಂ.ಆರ್. ಉತ್ತರ ಪತ್ರಿಕೆಯ ಕೆಳಭಾಗದ ನಿಗದಿತ ಜಾಗದಲ್ಲಿ ಪೂರ್ಣ ಸಹಿ ಮಾಡಬೇಕು.

**ಮಾಡಬೇಡಿ:**

1. **ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮುದ್ರಿತವಾಗಿರುವ ಟೈಮಿಂಗ್ ಮಾರ್ಕನ್ನು ತಿದ್ದಬಾರದು / ಹಾಳುಮಾಡಬಾರದು / ಅಳಿಸಬಾರದು.**
2. **ಮೂರನೇ ಬೆಲ್ ಬೆ. 10.30 ಕ್ಕೆ ಆಗುತ್ತದೆ. ಅಲ್ಲಿಯವರೆಗೂ,**
   - ಪ್ರಶ್ನೆಪತ್ರಿಕೆಯ ಬಲಭಾಗದಲ್ಲಿರುವ ಸೀಲ್ ಅನ್ನು ತೆಗೆಯಬಾರದು.
   - ಪ್ರಶ್ನೆಪತ್ರಿಕೆಯ ಒಳಗಡೆ ಇರುವ ಪ್ರಶ್ನೆಗಳನ್ನು ನೋಡಲು ಪ್ರಯತ್ನಿಸಬಾರದು ಮತ್ತು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸಬಾರದು.

**ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು**

1. **ಪ್ರಶ್ನೆಗಳಲ್ಲಿ ಬಳಸಿರುವ signs and symbols (ಚಿಹ್ನೆ ಮತ್ತು ಸಂಕೇತ) ಗಳನ್ನು, ಬೇರೆ ರೀತಿಯಲ್ಲಿ ಹೇಳದ ಹೊರತು, ನಿಗದಿತ ಪಠ್ಯಪುಸ್ತಕದಲ್ಲಿನ ಅರ್ಥವನ್ನು ಪರಿಗಣಿಸಬೇಕು.**
2. ಪ್ರಶ್ನೆಪತ್ರಿಕೆಯಲ್ಲಿ ಒಟ್ಟು 100 ಪ್ರಶ್ನೆಗಳಿದ್ದು, ಪ್ರತಿ ಪ್ರಶ್ನೆಗೂ 4 ಬಹು ಆಯ್ಕೆ ಉತ್ತರಗಳು ಇರುತ್ತವೆ. ಪ್ರತಿ ಪ್ರಶ್ನೆಯ ಕೆಳಗೆ ಕೊಟ್ಟಿರುವ ನಾಲ್ಕು ಬಹು ಆಯ್ಕೆಯ ಉತ್ತರಗಳಲ್ಲಿ ಸರಿಯಾದ ಒಂದು ಉತ್ತರವನ್ನು ಆಯ್ಕೆ ಮಾಡಿ.
3. **ಮೂರನೇ ಬೆಲ್ ಅಂದರೆ ಬೆ. 10.30** ರ ನಂತರ ಪ್ರಶ್ನೆಪತ್ರಿಕೆಯ ಬಲಭಾಗದಲ್ಲಿರುವ ಸೀಲ್ ತೆಗೆದು ಈ ಪ್ರಶ್ನೆಪತ್ರಿಕೆಯಲ್ಲಿ ಯಾವುದೇ ಪುಟಗಳು ಮುದ್ರಿತವಾಗಿಲ್ಲದೇ ಇರುವುದು ಕಂಡು ಬಂದಲ್ಲಿ ಅಥವಾ ಹರಿದು ಹೋಗಿದ್ದಲ್ಲಿ ಅಥವಾ ಯಾವುದೇ ಐಟಂಗಳು ಬಿಟ್ಟುಹೋಗಿದ್ದಲ್ಲಿ ಪ್ರಶ್ನೆಪತ್ರಿಕೆಯನ್ನು ಬದಲಾಯಿಸಿಕೊಳ್ಳುವುದು ನಂತರ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸುವುದು.
4. ಪ್ರಶ್ನೆಪತ್ರಿಕೆಯಲ್ಲಿನ ಪ್ರಶ್ನೆಗೆ ಅನುಗುಣವಾಗಿರುವ ಸರಿ ಉತ್ತರವನ್ನು **ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಅದೇ ಕ್ರಮ ಸಂಖ್ಯೆಯ ಮುಂದೆ ನೀಡಿರುವ ಸಂಬಂಧಿಸಿದ ವೃತ್ತವನ್ನು ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್‌ನಿಂದ ಸಂಪೂರ್ಣ ತುಂಬುವುದು.**

| ಸರಿಯಾದ ಕ್ರಮ CORRECT METHOD | ತಪ್ಪು ಕ್ರಮಗಳು WRONG METHODS | | |
|---|---|---|---|
| | ⊗ ② ③ ④ | ① ② ③ ④ | ① ● ● ④ |
| ① ● ③ ④ | ◐ ② ③ ④ | ① ● ③ ④ | ① ② ③ ④ |

5. ಈ ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಸ್ಕ್ಯಾನ್ ಮಾಡುವ ಸ್ಕ್ಯಾನರ್ ಬಹಳ ಸೂಕ್ಷ್ಮವಾಗಿದ್ದು ಸಣ್ಣ ಗುರುತನ್ನು ಸಹ ದಾಖಲಿಸುತ್ತದೆ. ಆದ್ದರಿಂದ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸುವಾಗ ಎಚ್ಚರಿಕೆ ವಹಿಸಿ.
6. ಪ್ರಶ್ನೆಪತ್ರಿಕೆಯಲ್ಲಿ ಕೊಟ್ಟಿರುವ ಖಾಲಿ ಜಾಗವನ್ನು ರಫ್ ಕೆಲಸಕ್ಕೆ ಉಪಯೋಗಿಸಿ. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಇದಕ್ಕೆ ಉಪಯೋಗಿಸಬೇಡಿ.
7. ಕೊನೆಯ ಬೆಲ್ ಅಂದರೆ ಮ. 12.30 ಆದ ನಂತರ ಉತ್ತರಿಸುವುದನ್ನು ನಿಲ್ಲಿಸಿ. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಯಥಾಸ್ಥಿತಿಯಲ್ಲಿ ನೀಡಿರಿ.
8. ಕೊಠಡಿ ಮೇಲ್ವಿಚಾರಕರು ಮೇಲ್ಭಾಗದ ಹಾಳೆಯನ್ನು ಪ್ರತ್ಯೇಕಿಸಿ (ಕಚೇರಿ ಪ್ರತಿ) ತಮ್ಮ ವಶದಲ್ಲಿ ಇಟ್ಟುಕೊಂಡು ತಳಬದಿಯ ಯಥಾಪ್ರತಿಯನ್ನು (ಅಭ್ಯರ್ಥಿಯ ಪ್ರತಿ) ಅಭ್ಯರ್ಥಿಗಳಿಗೆ ಕೊಡುತ್ತಾರೆ.
9. ಋಣಾತ್ಮಕ ಮೌಲ್ಯಮಾಪನವಿದ್ದು, (negative marking), ಪ್ರತಿ ತಪ್ಪು ಉತ್ತರಕ್ಕೆ 1/4 ಅಂಕಗಳನ್ನು ಕಳೆಯಲಾಗುವುದು.

**ಸೂಚನೆ: ಪ್ರಶ್ನೆ ಪತ್ರಿಕೆಯಲ್ಲಿನ ಯಾವುದಾದರು ಪ್ರಶ್ನೆಯ ಬಗ್ಗೆ ಸಂದೇಹ ಉಂಟಾದಲ್ಲಿ ಕನ್ನಡ / ಇಂಗ್ಲಿಷ್ ಭಾಗವನ್ನು ನೋಡುವುದು.**

SHIKARAT.COM
SEAL
www.shikarat.com

1. ಕೆಳಗಿನ ಯಾವ ಸ್ಥಳಗಳು ಡಚ್ಚರ ವ್ಯಾಪಾರ ಕೇಂದ್ರಗಳಾಗಿದ್ದವು?

(1) ಮಚಲಿಪಟ್ಟಣಂ, ದಿಯು, ದಮನ್, ಸೂರತ್
(2) ಸೂರತ್, ಆಗ್ರಾ, ಅಹ್ಮದಾಬಾದ್, ಬಾಂಬೆ
(3) ಪುಲಿಕಾಟ್, ಪಾಂಡಿಚೆರಿ, ಚಂದ್ರನಾಗೂರ್, ಮಾಹೆ
(4) ಪುಲಿಕಾಟ್, ಸೂರತ್, ಮಚಲಿಪಟ್ಟಣಂ, ನಾಗಪಟ್ಟಣಂ

2. ಕೆ. ಕಸ್ತೂರಿರಂಗನ್ ಸಮಿತಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ಸರಿಯಾಗಿವೆ?

a) ಈ ಸಮಿತಿಯನ್ನು 2022 ರಲ್ಲಿ ರಚಿಸಲಾಯಿತು.

b) ಈ ಸಮಿತಿಯನ್ನು ಪಶ್ಚಿಮ ಘಟ್ಟಗಳಲ್ಲಿರುವ ಪ್ರಮುಖ ಪರಿಸರ ಸಂಬಂಧಿ ಪ್ರದೇಶಗಳ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ರಚಿಸಲಾಗಿತ್ತು.

c) ಕರ್ನಾಟಕ ಸರ್ಕಾರವು ಸೆಪ್ಟೆಂಬರ್ 2024 ರಲ್ಲಿ ಕಸ್ತೂರಿರಂಗನ್ ಸಮಿತಿಯ ವರದಿಯನ್ನು ಅಂಗೀಕರಿಸಿತು.

(1) a, b ಮತ್ತು c ಸರಿಯಾಗಿವೆ
(2) ಕೇವಲ c ಮಾತ್ರ ಸರಿಯಾಗಿದೆ
(3) ಕೇವಲ b ಮಾತ್ರ ಸರಿಯಾಗಿದೆ
(4) ಕೇವಲ a ಮತ್ತು b ಮಾತ್ರ ಸರಿಯಾಗಿವೆ

3. ಹೊಂದಿಸಿ ಬರೆಯಿರಿ.

| | ನಿವೇಶನಗಳು | | ಸಾಕ್ಷ್ಯಗಳು |
|---|---|---|---|
| a) | ಹರಪ್ಪ | i. | ಹಡಗುಕಟ್ಟೆ |
| b) | ಮೊಹೆಂಜೊದಾರೋ | ii. | ಉಗ್ರಾಣಗಳು |
| c) | ಕಾಲಿಬಂಗಾನ್ | iii. | ಚಿನ್ನದ ನಾಣ್ಯಗಳು |
| d) | ಲೋಥಾಲ್ | iv. | ಯಜ್ಞಕುಂಡಗಳು |
| | | v. | ನರ್ತಕಿಯ ವಿಗ್ರಹ |

(1) a - i, b - iii, c - v, d - ii
(2) a - v, b - iv, c - iii, d - ii
(3) a - ii, b - v, c - iv, d - i
(4) a - iv, b - iii, c - ii, d - i

4. ಸರಿಯಾದ ಸಂಯೋಜನೆಯನ್ನು ಗುರುತಿಸಿರಿ.

a) 14 ನೇ ವಿಧಿ – ಕಾನೂನಿನ ಮುಂದೆ ಸಮಾನತೆ

b) 21 ನೇ ವಿಧಿ – ಬಿರುದುಗಳ ರದ್ದತಿ

c) 24 ನೇ ವಿಧಿ – ಅಸ್ಪೃಶ್ಯತೆಯ ರದ್ಧತಿ

d) 30 ನೇ ವಿಧಿ – ಧಾರ್ಮಿಕ ಸ್ವಾತಂತ್ರ್ಯದ ಹಕ್ಕು

ಈ ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರವಿರುವ ಕೋಡ್ ಅನ್ನು ಆರಿಸಿ :

(1) a ಮಾತ್ರ
(2) b ಮಾತ್ರ
(3) c ಮತ್ತು d ಮಾತ್ರ
(4) d ಮಾತ್ರ

SPACE FOR ROUGH WORK

SHIKARAT.COM



www.shikarat.com

5. ಈ ಕೆಳಕಂಡ ಯೋಜನೆಗಳು ಮತ್ತು ಅವುಗಳ ಉದ್ದೇಶಗಳನ್ನು ಹೊಂದಿಸಿ ಬರೆಯಿರಿ :

| ಯೋಜನೆಗಳು | ಉದ್ದೇಶಗಳು |
|---|---|
| a) ಪ್ರಧಾನಮಂತ್ರಿ ಶ್ರಮ ಯೋಗಿ-ಮಾನ-ಧನ ಯೋಜನಾ | i. ಯಾವುದೇ ಕಾರಣದಿಂದ ಸಾವು ಸಂಭವಿಸಿದರೆ, ಒಂದು ವರ್ಷದ ಜೀವ ವಿಮಾ ಸೌಲಭ್ಯ ಸುರಕ್ಷೆ |
| b) ಪ್ರಧಾನಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ | ii. ಅಸಂಘಟಿತ ವಲಯದ ಕಾರ್ಮಿಕರಿಗೆ ಪಿಂಚಣಿ ಯೋಜನೆ |
| c) ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆ | iii. ಅಪಘಾತದಿಂದ ಸಾವು ಅಥವಾ ಅಂಗವೈಕಲ್ಯತೆ ಉಂಟಾದರೆ, ಒಂದು ವರ್ಷದ ಅಪಘಾತ ವಿಮಾ ಯೋಜನೆ ಸೌಲಭ್ಯ |
| d) ಪ್ರಧಾನಮಂತ್ರಿ ಸುರಕ್ಷಾ ಬೀಮಾ ಯೋಜನೆ | iv. ಬಡ ಕುಟುಂಬದವರಿಗೆ ವೃದ್ಧಾಪ್ಯ, ಸಾವು ಮತ್ತು ಹೆರಿಗೆ ಸಂದರ್ಭದಲ್ಲಿ ಸಾಮಾಜಿಕ ಸೌಲಭ್ಯಗಳು |

(1) a – ii, b – iv, c – i, d – iii
(2) a – iv, b – i, c – iii, d – ii
(3) a – ii, b – i, c – iv, d – iii
(4) a – iii, b – ii, c – i, d – iv

6. ಮಗಧವನ್ನು ಆಳಿದ ರಾಜವಂಶಗಳ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿ :

(1) ಹರ್ಯಂಕ – ಮೌರ್ಯ – ಶಿಶುನಾಗ – ನಂದ – ಶುಂಗ
(2) ಹರ್ಯಂಕ – ಶಿಶುನಾಗ – ನಂದ – ಮೌರ್ಯ – ಶುಂಗ
(3) ಶಿಶುನಾಗ – ನಂದ – ಮೌರ್ಯ – ಶುಂಗ – ಹರ್ಯಂಕ
(4) ಶುಂಗ – ಹರ್ಯಂಕ – ಮೌರ್ಯ – ಶಿಶುನಾಗ – ನಂದ

7. ಗ್ರಾಮ ಪಂಚಾಯತ್‌ಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ :

a) ಒಂದು ಗ್ರಾಮ ಪಂಚಾಯತಿಯ ವ್ಯಾಪ್ತಿಗೆ ಒಂದು ಗ್ರಾಮ ಅಥವಾ ಹಲವು ಗ್ರಾಮಗಳು ಬರುತ್ತವೆ.
b) ಗ್ರಾಮ ಪಂಚಾಯತಿಯ ಅಧ್ಯಕ್ಷರಿಗೆ ಹಣಕಾಸು ವ್ಯವಹಾರದ ಚೆಕ್ಕಿಗೆ ಸಹಿ ಮಾಡುವ ಅಧಿಕಾರವಿರುತ್ತದೆ.
c) ಗ್ರಾಮ ಆಡಳಿತಾಧಿಕಾರಿ (VAO), ಗ್ರಾಮ ಪಂಚಾಯತಿಯ ಅಧೀನದಲ್ಲಿ ಅಧ್ಯಕ್ಷರ ಆದೇಶದಂತೆ ಕಾರ್ಯನಿರ್ವಹಿಸಬೇಕು.
d) ಗ್ರಾಮ ಪಂಚಾಯತಿಯ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಆಯ್ಕೆಗೆ ಯಾವುದೇ ಮೀಸಲಾತಿ ಇರುವುದಿಲ್ಲ.

(1) a ಮತ್ತು b ಮಾತ್ರ ಸರಿ
(2) a ಮತ್ತು d ಮಾತ್ರ ಸರಿ
(3) c ಮತ್ತು d ಮಾತ್ರ ಸರಿ
(4) b ಮತ್ತು c ಮಾತ್ರ ಸರಿ

SPACE FOR ROUGH WORK


www.shikarat.com

8. ಬಂದೂಕಿನಿಂದ ಗುಂಡನ್ನು ಹಾರಿಸಿದಾಗ, ಬಂದೂಕು ಗುಂಡಿನ ಮೇಲೆ ಬಲವನ್ನು ಹಾಗೂ ಗುಂಡು ಬಂದೂಕಿನ ಮೇಲೆ ಬಲವನ್ನು ಬೀರುತ್ತದೆ.

ಹೇಳಿಕೆ A : ಗುಂಡಿನ ಮೇಲಿನ ಬಲ ಮತ್ತು ಬಂದೂಕಿನ ಮೇಲಿನ ಬಲ ಸಮ ಮತ್ತು ವಿರುದ್ಧವಾಗಿರುತ್ತದೆ.

ಹೇಳಿಕೆ B : ಗುಂಡು ಮತ್ತು ಬಂದೂಕಿನ ಒಟ್ಟು ಸಂವೇಗವು (Total momentum) ಸಂರಕ್ಷಿಸಲ್ಪಡುತ್ತದೆ.

ಹೇಳಿಕೆ C : ಗುಂಡು ಮತ್ತು ಬಂದೂಕಿನ ಒಟ್ಟು ಚಲನಶಕ್ತಿಯು (kinetic energy) ಸಂರಕ್ಷಿಸಲ್ಪಡುತ್ತದೆ.

ಮೇಲಿನವುಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳು :

(1) ಹೇಳಿಕೆ A ಮತ್ತು ಹೇಳಿಕೆ B.
(2) ಹೇಳಿಕೆ B ಮತ್ತು ಹೇಳಿಕೆ C.
(3) ಹೇಳಿಕೆ A ಮತ್ತು ಹೇಳಿಕೆ C.
(4) ಹೇಳಿಕೆ C ಮಾತ್ರ.

9. ವಜ್ರಕ್ಕೆ ಸಂಬಂಧಿಸಿದಂತೆ, ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ?

(1) ವಜ್ರದಲ್ಲಿ ಪ್ರತಿ ಕಾರ್ಬನ್ ಪರಮಾಣು ಇತರೆ ಮೂರು ಕಾರ್ಬನ್‌ಗಳೊಂದಿಗೆ ಬಂಧಗೊಂಡಿದೆ.
(2) ವಜ್ರದಲ್ಲಿ ಪ್ರತಿ ಕಾರ್ಬನ್ ಪರಮಾಣು ಇತರೆ ನಾಲ್ಕು ಕಾರ್ಬನ್‌ಗಳೊಂದಿಗೆ ಬಂಧಗೊಂಡಿದೆ.
(3) ವಜ್ರದಲ್ಲಿ ಪ್ರತಿ ಕಾರ್ಬನ್ ಪರಮಾಣು ಇತರೆ ಆರು ಕಾರ್ಬನ್‌ಗಳೊಂದಿಗೆ ಬಂಧಗೊಂಡಿದೆ.
(4) ವಜ್ರದಲ್ಲಿ ಕಾರ್ಬನ್-ಕಾರ್ಬನ್ ಬಂಧವು ಅಸ್ತಿತ್ವದಲ್ಲಿರುವುದಿಲ್ಲ.

10. ಕೆಳಕಂಡ ಅಂತಾರಾಷ್ಟ್ರೀಯ ಸಂಸ್ಥೆಗಳು ಮತ್ತು ಕೇಂದ್ರ ಸ್ಥಳಗಳನ್ನು ಹೊಂದಿಸಿರಿ :

| ಅಂತಾರಾಷ್ಟ್ರೀಯ ಸಂಸ್ಥೆಗಳು | ಕೇಂದ್ರ ಸ್ಥಾನ |
|---|---|
| a) ಆಫ್ರಿಕನ್ ಯೂನಿಯನ್ (AU) | i. ಬ್ರುಸೆಲ್ಸ್ |
| b) ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘಟನೆ (ASEAN) | ii. ಅಡಿಸ್ ಅಬಾಬಾ |
| c) ನಾರ್ತ್ ಅಟ್ಲಾಂಟಿಕ್ ಟ್ರೀಟಿ ಆರ್ಗನೈಸೇಷನ್ (NATO) | iii. ಜಿನಿವಾ |
| d) ವಿಶ್ವ ವ್ಯಾಪಾರ ಸಂಘಟನೆ (WTO) | iv. ಜಕಾರ್ತಾ |

ಕೆಳಕಂಡ ಸಂಕೇತಗಳನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ :

(1) a – i, b – ii, c – iii, d – iv
(2) a – ii, b – iv, c – i, d – iii
(3) a – ii, b – iv, c – iii, d – i
(4) a – iv, b – ii, c – iii, d – i

SPACE FOR ROUGH WORK


www.shikarat.com

11. ಕ್ವಾಡ್ರಿಲ್ಯಾಟೆರಲ್ ಸೆಕ್ಯುರಿಟಿ ಡಯಲಾಗ್ (QUAD) ನ ಸದಸ್ಯ ರಾಷ್ಟ್ರಗಳು ಯಾವುವು?

a) ಭಾರತ

b) ಜಪಾನ್

c) ಯು.ಎಸ್.ಎ.

d) ಆಸ್ಟ್ರೇಲಿಯಾ

ಕೆಳಗಿನ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ :

(1) a ಮತ್ತು c ಮಾತ್ರ
(2) a ಮತ್ತು b ಮಾತ್ರ
(3) a, b ಮತ್ತು c ಮಾತ್ರ
(4) a, b, c ಮತ್ತು d

12. ಈ ಕೆಳಕಂಡ ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿಗಳು ಮತ್ತು ಅವರ ದೇಶಕ್ಕೆ ಸಂಬಂಧಿಸಿದ ಯಾವ ಜೋಡಿ/ಜೋಡಿಗಳು ಸರಿಯಾಗಿ ಹೊಂದಾಣಿಕೆಯಾಗಿದೆ/ಹೊಂದಾಣಿಕೆಯಾಗಿವೆ?

| ಮಹಾಕಾರ್ಯದರ್ಶಿ | | ದೇಶ |
|---|---|---|
| a) ಟ್ರಿಗ್ವಿ ಲೀ | – | ನಾರ್ವೆ |
| b) ಯು. ಥಾಂಟ್ | – | ಮ್ಯಾನ್ಮಾರ್ |
| c) ಜೇವಿಯರ್ ಫೆರೇಜ್ ಡಿ ಕ್ಯೂಲರ್ | – | ಪೋರ್ಚುಗಲ್ |
| d) ಆಂಟೋನಿಯೋ ಗುಟೆರೆಸ್ | – | ಪೆರು |

(1) a ಮಾತ್ರ
(2) a ಮತ್ತು b ಮಾತ್ರ
(3) a ಮತ್ತು c ಮಾತ್ರ
(4) a, b, c ಮತ್ತು d

13. ಈ ಕೆಳಗಿನವರಲ್ಲಿ ವಿಜಯನಗರವನ್ನು ಆಳಿದ ಸಂಗಮ ವಂಶದ ರಾಜರನ್ನು ಗುರುತಿಸಿ :

a) ಎರಡನೇ ಬುಕ್ಕ

b) ವೀರ ನರಸಿಂಹ

c) ಒಂದನೇ ದೇವರಾಯ

d) ಮಲ್ಲಿಕಾರ್ಜುನ

ಸರಿಯಾದ ಉತ್ತರವನ್ನು ಕೆಳಕಂಡ ಸಂಕೇತಗಳಿಂದ ಆಯ್ಕೆ ಮಾಡಿ :

(1) a ಮತ್ತು b ಮಾತ್ರ
(2) b ಮತ್ತು d ಮಾತ್ರ
(3) a, b ಮತ್ತು d ಮಾತ್ರ
(4) a, c ಮತ್ತು d ಮಾತ್ರ

SPACE FOR ROUGH WORK





www.shikarat.com

SHIKARAT.COM

14. 'ಶ್ರವಣಬೆಳಗೊಳ' ದೊಂದಿಗೆ ಐತಿಹಾಸಿಕ ಸಂಬಂಧ ಹೊಂದಿರುವ ವ್ಯಕ್ತಿಗಳನ್ನು ಗುರುತಿಸಿ :

a) ಚಂದ್ರಗುಪ್ತ ಮೌರ್ಯ

b) ಚಾವುಂಡರಾಯ

c) ರಾಣಿ ಶಾಂತಲಾ

d) ಚಿಕ್ಕದೇವರಾಜ ಒಡೆಯರ್

e) ಮಲಿಕ್ ಕಾಫೂರ್

ಸರಿಯಾದ ಉತ್ತರವನ್ನು ಕೆಳಗಿನ ಸಂಕೇತಗಳಿಂದ ಆಯ್ಕೆ ಮಾಡಿ :

(1) a, b ಮತ್ತು c
(2) a, b, c ಮತ್ತು d
(3) a, c, d ಮತ್ತು e
(4) b, c, d ಮತ್ತು e

15. ಫೆರಿಸ್ತಾನ ಪ್ರಕಾರ ಆದಿಲ್‌ಷಾಹಿಗಳ ಕಾಲದಲ್ಲಿ ಬಿಜಾಪುರಕ್ಕೆ ನೀರಿನ ವ್ಯವಸ್ಥೆ ಕಲ್ಪಿಸಿದ ಸುಲ್ತಾನ ಯಾರು?

(1) ಇಸ್ಮಾಯಿಲ್ ಆದಿಲ್ ಖಾನ್
(2) ಒಂದನೇ ಅಲಿ ಆದಿಲ್ ಷಾ
(3) ಮೆಹಮದ್ ಆದಿಲ್ ಷಾ
(4) ಇಬ್ರಾಹಿಂ ಆದಿಲ್ ಷಾ

16. ಕರ್ನಾಟಕದಲ್ಲಿ ಬ್ರಿಟೀಷರ ವಿರುದ್ಧ ನಡೆದ ಸಶಸ್ತ್ರ ಬಂಡಾಯಗಳನ್ನು ಸರಿಯಾದ ಕಾಲಾನುಕ್ರಮದಲ್ಲಿ ಜೋಡಿಸಿ :

a) ಸೂಪಾ ದಂಗೆ

b) ನಿಪ್ಪಾಣಿ ದಂಗೆ

c) ಸಿಂದಗಿ ದಂಗೆ

d) ಬೀದರ್ ದಂಗೆ

(1) a, b, d, c
(2) d, c, a, b
(3) b, d, a, c
(4) d, c, b, a

17. ಕೆಲವೊಂದು ವಿದ್ಯಮಾನಗಳನ್ನು ಮತ್ತು ಅವುಗಳ ಹಿಂದಿರುವ ಕಾರಣ/ತತ್ವಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

| | ವಿದ್ಯಮಾನ | | ಕಾರಣ/ತತ್ವ |
|---|---|---|---|
| a) | ನಕ್ಷತ್ರಗಳ ಮಿನುಗುವಿಕೆ | – | ವಾಯುಮಂಡಲ ವಕ್ರೀಭವನ |
| b) | ಕಾಮನ ಬಿಲ್ಲು | – | ಪ್ರಸರಣ ಹಾಗೂ ಸಂಪೂರ್ಣ ಆಂತರಿಕ ಪ್ರತಿಫಲನ |
| c) | ಆಕಾಶದ ನೀಲಿ ಬಣ್ಣ | – | ಬೆಳಕಿನ ಚದುರುವಿಕೆ |

ಮೇಲಿನವುಗಳಲ್ಲಿ ಎಷ್ಟು ಹೊಂದಾಣಿಕೆ/ಹೊಂದಾಣಿಕೆಗಳು ಸರಿಯಾಗಿವೆ?

(1) ಕೇವಲ ಒಂದು
(2) ಕೇವಲ ಎರಡು
(3) ಎಲ್ಲಾ ಮೂರೂ
(4) ಯಾವ ಹೊಂದಾಣಿಕೆಯೂ ಸರಿಯಾಗಿಲ್ಲ

SPACE FOR ROUGH WORK



www.shikarat.com

18. ಜಲಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣಕ್ಕಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಕರ್ನಾಟಕ ಸರ್ಕಾರವು ಈ ಕೆಳಗಿನ ಯಾವ ಕಾಯ್ದೆಯ ಅಡಿ ರಚಿಸಿತು?

(1) ಜಲ (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ, 1974

(2) ಪರಿಸರ ಸಂರಕ್ಷಣೆ ಕಾಯ್ದೆ, 1986

(3) ಜಲ (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಸೆಸ್ ಕಾಯ್ದೆ, 1977

(4) ಜಲ (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ, 1981

19. ಈ ಕೆಳಗಿನವುಗಳನ್ನು ಓದಿ :

a) ಕಲ್ಯಾಣ್ ಸೋನಾ
b) ಸೊನಾಲಿಕಾ
c) ಜಯಾ
d) ರತ್ನ
e) ಐಆರ್–8 (IR-8)

ಇವುಗಳಲ್ಲಿ ಅಕ್ಕಿಯ ತಳಿವಿಧಗಳೆಂದರೆ :

(1) a, c, d, e ಮಾತ್ರ
(2) c, d, e ಮಾತ್ರ
(3) a, b, c, e ಮಾತ್ರ
(4) b, c, d ಮಾತ್ರ

20. ಶಿಶುವಿನ ಜನನ ನಂತರದಲ್ಲಿ ಸ್ತನಗ್ರಂಥಿಗಳಿಂದ ಕ್ಷೀರದ ಸ್ರವಿಸುವಿಕೆ ಮತ್ತು ಬಿಡುಗಡೆಯನ್ನು ಪ್ರಚೋದಿಸಲು ಅತ್ಯಗತ್ಯವಾದ ರಸದೂತವೆಂದರೆ :

(1) ಮೆಲಟೋನಿನ್
(2) ಆಕ್ಸಿಟೋಸಿನ್
(3) ವ್ಯಾಸೊಪ್ರೆಸ್ಸಿನ್
(4) ಪ್ರೊಲ್ಯಾಕ್ಟಿನ್

21. ಮಾನವನ ಹೃದಯದ ಅಂಗಗಳು ಮತ್ತು ಅವುಗಳ ಕಾರ್ಯಗಳನ್ನು ಕೆಳಗೆ ನೀಡಲಾಗಿದೆ :

a) ಬಲ ಹೃತ್ಕರ್ಣ – ದೇಹದ ಭಾಗಗಳಿಂದ ಅಶುದ್ಧ ರಕ್ತ ಸ್ವೀಕಾರ
b) ಎಡ ಹೃತ್ಕರ್ಣ – ದೇಹದ ಭಾಗಗಳಿಂದ ಶುದ್ಧರಕ್ತ ಸ್ವೀಕಾರ
c) ಬಲ ಹೃತ್ಕುಕ್ಷಿ – ಎಡ ಹೃತ್ಕರ್ಣದಿಂದ ಅಶುದ್ಧ ರಕ್ತ ಸ್ವೀಕಾರ
d) ಎಡ ಹೃತ್ಕುಕ್ಷಿ – ಬಲ ಹೃತ್ಕರ್ಣದಿಂದ ಶುದ್ಧರಕ್ತ ಸ್ವೀಕಾರ

ಮೇಲಿನವುಗಳಲ್ಲಿ ಎಷ್ಟು ಜೋಡಿ/ಜೋಡಿಗಳು ಸರಿಯಾಗಿ ಹೊಂದಾಣಿಕೆಯಾಗಿದೆ/ಹೊಂದಾಣಿಕೆಯಾಗಿವೆ?

(1) 1 ಮಾತ್ರ
(2) 2 ಮಾತ್ರ
(3) 3 ಮಾತ್ರ
(4) ಎಲ್ಲಾ 4

SPACE FOR ROUGH WORK

SHIKARAT.COM



www.shikarat.com

22. 2023 ರಲ್ಲಿ ವೈದ್ಯಕೀಯ ಮತ್ತು ಶರೀರ ಕ್ರಿಯಾಶಾಸ್ತ್ರದ ಕ್ಷೇತ್ರದಲ್ಲಿ COVID 19 ಕ್ಕೆ ಪರಿಣಾಮಕಾರಿ mRNA ವ್ಯಾಕ್ಸಿನ್ ಅಭಿವೃದ್ಧಿಪಡಿಸಿ ನೋಬೆಲ್ ಪಾರಿತೋಷಕವನ್ನು ಪಡೆದವರು ಯಾರು?

(1) ಕಾರಿಕೋ ಮತ್ತು ವೈಸ್‌ಮನ್
(2) ಹೆಚ್.ಜಿ. ಖೊರಾನಾ
(3) ವಾಟ್ಸನ್ ಮತ್ತು ಕ್ರಿಕ್
(4) ಜೆಫ್ರಿ ಇ ಹಿಂಟನ್

23. ಕರ್ನಾಟಿಕ್ ಯುದ್ಧಗಳಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳನ್ನು ಪರಿಗಣಿಸಿ :

a) ಮೊದಲ ಕರ್ನಾಟಿಕ ಯುದ್ಧ : ಪ್ಯಾರೀಸ್ ಒಪ್ಪಂದ
b) ಎರಡನೇ ಕರ್ನಾಟಿಕ ಯುದ್ಧ : ಪಾಂಡಿಚೆರಿ ಒಪ್ಪಂದ
c) ಮೂರನೇ ಕರ್ನಾಟಿಕ ಯುದ್ಧ : ಎಕ್ಸ್-ಲಾ-ಚಾಪೆಲ್ ಒಪ್ಪಂದ

ಮೇಲಿನ ಎಷ್ಟು ಒಪ್ಪಂದ/ಒಪ್ಪಂದಗಳು ಸರಿಯಾಗಿ ಹೊಂದಿಕೆಯಾಗಿದೆ/ಹೊಂದಿಕೆಯಾಗಿವೆ ?

(1) ಒಂದು ಮಾತ್ರ
(2) ಎರಡು ಮಾತ್ರ
(3) ಎಲ್ಲಾ ಮೂರು
(4) ಯಾವುದೂ ಇಲ್ಲ

24. ಭಾರತದಲ್ಲಿ ಗಾಂಧೀಜಿಯವರ ಆರಂಭಿಕ ಹೋರಾಟಗಳಿಗೆ ಸಂಬಂಧಿಸಿದಂತೆ, ಈ ಕೆಳಗಿನ ಜೋಡಿಗಳನ್ನು ಪರಿಗಣಿಸಿ :

a) ಚಂಪಾರಣ್ ಸತ್ಯಾಗ್ರಹ : ಪ್ರಥಮ ಕಾನೂನುಭಂಗ ಚಳುವಳಿ
b) ಅಹ್ಮದಾಬಾದ್ ಹತ್ತಿಗಿರಣಿ ಮುಷ್ಕರ : ಪ್ರಥಮ ಅಸಹಕಾರ ಚಳುವಳಿ
c) ಖೇಡಾ ಸತ್ಯಾಗ್ರಹ : ಪ್ರಥಮ ಉಪವಾಸ ಸತ್ಯಾಗ್ರಹ

ಮೇಲಿನ ಎಷ್ಟು ಜೋಡಿ/ಜೋಡಿಗಳು ಸರಿಯಾಗಿ ಹೊಂದಿಕೆಯಾಗಿದೆ/ಹೊಂದಿಕೆಯಾಗಿವೆ ?

(1) ಒಂದು ಮಾತ್ರ
(2) ಎರಡು ಮಾತ್ರ
(3) ಎಲ್ಲಾ ಮೂರು
(4) ಯಾವುದೂ ಅಲ್ಲ

25. ದಕ್ಷಿಣ ಭಾರತದಲ್ಲಿ ರೈತವಾರಿ ಪದ್ಧತಿಯ ಜಾರಿಗೆ ಶ್ರಮಿಸಿದವರು ಯಾರು?

a) ಅಲೆಗ್ಸಾಂಡರ್ ರೀಡ್
b) ಹಾಲ್ಟ್ ಮೆಕೆಂಜಿ
c) ಥಾಮಸ್ ಮನ್ರೋ
d) ಜೇಮ್ಸ್ ಗ್ರಾಂಟ್ ಡಫ್

ಕೆಳಗಿನವುಗಳಲ್ಲಿ ಸರಿಯಾದುದನ್ನು ಗುರುತಿಸಿ :

(1) a ಮತ್ತು b ಮಾತ್ರ
(2) a, b ಮತ್ತು c ಮಾತ್ರ
(3) a ಮತ್ತು c ಮಾತ್ರ
(4) b, c ಮತ್ತು d ಮಾತ್ರ

SPACE FOR ROUGH WORK


www.shikarat.com

26. ಪ್ಯಾರಿಸ್ ಒಲಂಪಿಕ್ಸ್-2024 ರ ಸಮಾರೋಪ ಸಮಾರಂಭದಲ್ಲಿ ಭಾರತದ ಧ್ವಜವನ್ನು ಹಿಡಿದವರು ಯಾರು?

(1) ಮನು ಭಾಕರ್ ಮತ್ತು ಪಿ.ಆರ್. ಶ್ರೀಜೇಶ್

(2) ನೀರಜ್ ಚೋಪ್ರಾ ಮತ್ತು ಪಿ.ಆರ್. ಶ್ರೀಜೇಶ್

(3) ಮನು ಭಾಕರ್ ಮತ್ತು ವಿನೇಶ್ ಫೋಗಟ್

(4) ಸ್ವಪ್ನಿಲ್ ಕುಸಾಳೆ ಮತ್ತು ಅಮನ್ ಸೆಹ್ರಾವತ್

27. 18 ನೇ ಲೋಕಸಭೆಯಲ್ಲಿ ಅತ್ಯಂತ ಹೆಚ್ಚು ಸಂಸದರನ್ನು ಹೊಂದಿರುವ ಪಕ್ಷ ಯಾವುದು?

(1) ಎನ್‌ಡಿಎ

(2) ಐಎನ್‌ಡಿಐಎ

(3) ಬಿಜೆಪಿ

(4) ಟಿಡಿಪಿ

28. ಪ್ಯಾರಾಲಿಂಪಿಕ್ಸ್ 2024 ಕ್ಕೆ ಸಂಬಂಧಿಸಿದ ಕೆಳಗಿನ ಹೇಳಿಕೆಗಳನ್ನು ಅವಲೋಕಿಸಿ :

a) ಪ್ಯಾರಾಲಿಂಪಿಕ್ಸ್ ಫ್ರಾನ್ಸ್ ರಾಜಧಾನಿ ಪ್ಯಾರಿಸ್‌ನಲ್ಲಿ ನಡೆದಿರುತ್ತದೆ.

b) ಪ್ಯಾರಾಲಿಂಪಿಕ್ಸ್ 5 ವರ್ಷಗಳಿಗೊಮ್ಮೆ ನಡೆಯುತ್ತದೆ

c) 2024 ರ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಕ್ರೀಡಾಪಟುಗಳು ಮೊದಲ ಬಾರಿಗೆ ಹೆಚ್ಚು ಪದಕ ಗೆದ್ದಿದ್ದಾರೆ

d) ಕ್ರಮವಾಗಿ ಚೀನಾ, ಬ್ರಿಟನ್ ಮತ್ತು ಅಮೆರಿಕ ಹೆಚ್ಚು ಪದಕ ಗೆದ್ದ ಮೊದಲ 3 ದೇಶಗಳಾಗಿವೆ.

ಮೇಲಿನ ಹೇಳಿಕೆಗಳಲ್ಲಿ ಯಾವ ಹೇಳಿಕೆಗಳು ಸರಿಯಾಗಿವೆ ಎಂಬುದನ್ನು ಕೆಳಗಿನ ಸಂಕೇತಗಳಿಂದ ಗುರುತಿಸಿರಿ.

(1) a, c ಮತ್ತು d ಸರಿಯಾಗಿವೆ

(2) b, C ಮತ್ತು d ಸರಿಯಾಗಿವೆ

(3) a, b ಮತ್ತು d ಸರಿಯಾಗಿವೆ

(4) a ಮತ್ತು c ಸರಿಯಾಗಿವೆ

29. ಭಾರತವು ತನ್ನ ಪ್ರಥಮ ಬಾಹ್ಯಾಕಾಶ ದಿನವನ್ನು ಈ ಕೆಳಕಂಡ ಯಾವ ದಿನಾಂಕದಂದು ಆಚರಿಸಿತು?

(1) ಆಗಸ್ಟ್ 22, 2024

(2) ಆಗಸ್ಟ್ 23, 2024

(3) ಆಗಸ್ಟ್ 25, 2024

(4) ಆಗಸ್ಟ್ 27, 2024

30. ಭಾರತದ ರಾಷ್ಟ್ರೀಯ ಲಾಂಛನದಲ್ಲಿ ಈ ಕೆಳಕಂಡ ಯಾವ ಪ್ರಾಣಿಗಳು ಕಂಡುಬರುತ್ತವೆ?

a) ಹುಲಿ

b) ಆನೆ

c) ಸಿಂಹ

d) ನಂದಿ

e) ಕುದುರೆ

ಈ ಕೆಳಕಂಡ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.

(1) a, b, c, d ಮತ್ತು e ಸರಿಯಾಗಿವೆ

(2) b, C, d ಮತ್ತು e ಸರಿಯಾಗಿವೆ

(3) a, b, c ಮತ್ತು d ಸರಿಯಾಗಿವೆ

(4) a, b, c ಮತ್ತು e ಸರಿಯಾಗಿವೆ

SPACE FOR ROUGH WORK



www.shikarat.com

31. ಈ ಕೆಳಕಂಡ ಯಾವುದು ಭರತನಾಟ್ಯದ ಅನುಕ್ರಮದ ಭಾಗವಾಗಿಲ್ಲ?

a) ಅಲರಿಪ್ಪು
b) ತರಂಗಂ
c) ಲಾಸ್ಯ
d) ವರ್ಣಂ
e) ತಿಲ್ಲಾಣ

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿರಿ :

(1) a, b ಮತ್ತು d ಮಾತ್ರ
(2) b, c ಮತ್ತು d ಮಾತ್ರ
(3) b ಮತ್ತು c ಮಾತ್ರ
(4) a ಮತ್ತು b ಮಾತ್ರ

32. 2024 ರ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ರಾಮ್‌ಸಾರ್ ತಾಣವಾಗಿ ಹೊಸದಾಗಿ ಸೇರ್ಪಡೆ ಮಾಡಲಾಗಿರುವ ಈ ಕೆಳಕಂಡ ಸ್ಥಳಗಳನ್ನು ಪರಿಗಣಿಸಿರಿ :

a) ನಂಜಾರಯನ್ ಪಕ್ಷಿಧಾಮ
b) ಕಝುವೇಲಿ ಪಕ್ಷಿಧಾಮ
c) ಶರಾವತಿ ಕಾಂಡ್ಲಾ ಮ್ಯಾಂಗ್ರೋವ್
d) ತವಾ ಜಲಾಶಯ

ಈ ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರ ಆರಿಸಿ :

(1) ಕೇವಲ a ಮತ್ತು b ಸರಿ
(2) ಕೇವಲ a, b ಮತ್ತು c ಸರಿ
(3) ಕೇವಲ a, b ಮತ್ತು d ಸರಿ
(4) a, b, c ಮತ್ತು d ಸರಿ

33. ಜಿ.ಪಿ.ಎಸ್. ಸಂಕೇತಗಳ ನಿಖರತೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸಲು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಹಾಗೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಜಂಟಿಯಾಗಿ ಅಭಿವೃದ್ಧಿ ಪಡಿಸಿದ ವ್ಯವಸ್ಥೆಯ ಹೆಸರೇನು?

(1) ಸುಗಮ್ಯ ಭಾರತ್ ಅಭಿಯಾನ್
(2) ಕೃಷಿ ಉಡಾನ್ 2.0
(3) ಡಿಜಿ (Digi) ಯಾತ್ರಾ
(4) ಗಗನ್ (GAGAN)

34. ಭಾರತದ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರು ಭಾರತದ ನವೋದ್ಯಮ (ಸ್ಟಾರ್ಟ್‌ಅಪ್) ಗಳನ್ನು ಉತ್ತೇಜಿಸಲು ಏಂಜೆಲ್ ತೆರಿಗೆಯನ್ನು ರದ್ದುಗೊಳಿಸಿದ್ದಾರೆ. ಏಂಜೆಲ್ ತೆರಿಗೆಯನ್ನು ರದ್ದುಗೊಳಿಸಿದಾಗ ಅದರ ದರ ಎಷ್ಟಾಗಿತ್ತು?

(1) 28.9%
(2) 25.9%
(3) 20.9%
(4) 30.9%

35. ಅನುರಾ ಕುಮಾರ ದಿಸ್ಸನಾಯಕೆಯವರು ಪ್ರಸ್ತುತ ಶ್ರೀಲಂಕಾದ ಅಧ್ಯಕ್ಷರಾಗಿದ್ದು, ಅವರು ಈ ಕೆಳಗಿನ ಯಾವ ರಾಜಕೀಯ ಪಕ್ಷಕ್ಕೆ ಸೇರಿದವರಾಗಿದ್ದಾರೆ?

(1) ಜನತಾ ವಿಮುಕ್ತಿ ಪೆರಮುನಾ
(2) ಯುನೈಟೆಡ್ ನ್ಯಾಷನಲ್ ಪಾರ್ಟಿ
(3) ಸಿಲೋನ್ ವರ್ಕರ್ಸ್ ಕಾಂಗ್ರೆಸ್
(4) ಡೆಮೊಕ್ರಟಿಕ್ ಪೀಪಲ್ಸ್ ಫ್ರಂಟ್

36. ಈ ಕೆಳಗಿನವರಲ್ಲಿ ಯಾರನ್ನು ಬಾಂಗ್ಲಾದೇಶದ 'ರಾಷ್ಟ್ರಪಿತ' ಎಂದು ಕರೆಯಲಾಗುತ್ತದೆ?

(1) ಶೇಖ್ ಮುಜೀಬುರ್ ರೆಹಮಾನ್
(2) ಮೊಹಮ್ಮದ್ ಶಹಾಬುದ್ದೀನ್
(3) ಮೊಹಮ್ಮದ್ ಯೂನುಸ್
(4) ಹುಸೇನ್ ಮೊಹಮ್ಮದ್ ಇರ್ಷಾದ್

SPACE FOR ROUGH WORK



www.shikarat.com

37. ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ತಪ್ಪಾಗಿದೆ/ತಪ್ಪಾಗಿವೆ?

a) ಭಾರತ ಸರ್ಕಾರವು **1950** ರಲ್ಲಿ ಈ ಪ್ರಶಸ್ತಿಯನ್ನು ಪರಿಚಯಿಸಿತು

b) ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಪ್ರಥಮ ಬಾರಿಗೆ ಪೃಥ್ವಿರಾಜ್ ಕಪೂರ್‌ರವರು ಪಡೆದರು.

c) ಈ ಪ್ರಶಸ್ತಿಯನ್ನು ಮಿಥುನ್ ಚಕ್ರವರ್ತಿಯವರಿಗೆ **69** ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಸಮಾರಂಭದಲ್ಲಿ ನೀಡಿ ಗೌರವಿಸಲಾಯಿತು.

d) ಡಾ. ರಾಜ್‌ಕುಮಾರ್‌ರವರು **43** ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಸ್ವೀಕರಿಸಿದರು.

(1) c ಮತ್ತು d ತಪ್ಪಾಗಿವೆ
(2) ಕೇವಲ d ತಪ್ಪಾಗಿದೆ
(3) a, b ಮತ್ತು c ತಪ್ಪಾಗಿವೆ
(4) ಕೇವಲ c ತಪ್ಪಾಗಿದೆ

38. HSRP ಯನ್ನು ವಿಸ್ತರಿಸಿರಿ :

(1) ಹೈ ಸ್ಪೀಡ್ ರಿಜಿಸ್ಟ್ರೇಷನ್ ಪ್ಲೇಸ್
(2) ಹೈ ಸೆಕ್ಯೂರಿಟಿ ರಿಜಿಸ್ಟ್ರೇಷನ್ ಪ್ಲೇಟ್
(3) ಹೆವಿ ಸೆಕ್ಯುರಿಟಿ ರಿಜಿಸ್ಟ್ರೇಷನ್ ಪ್ಲೇಸ್
(4) ಹೈ ಸ್ಪೇಸ್ ರಿಜಿಸ್ಟ್ರೇಷನ್ ಪ್ಲೇಟ್

39. ಭಾರತ ಸರ್ಕಾರವು ರಚಿಸಿದ 'ಒಂದು ರಾಷ್ಟ್ರ ಒಂದು ಚುನಾವಣೆ' ಉನ್ನತಾಧಿಕಾರ ಸಮಿತಿಯ ಅಧ್ಯಕ್ಷರು ಯಾರಾಗಿದ್ದರು?

(1) ಅಮಿತ್ ಷಾ
(2) ಪ್ರಹ್ಲಾದ್ ಜೋಶಿ
(3) ಹರೀಶ್ ಸಾಳ್ವೆ
(4) ರಾಮನಾಥ್ ಕೋವಿಂದ್

40. ಹೊಂದಿಸಿ ಬರೆಯಿರಿ.

| | | | |
|---|---|---|---|
| a) | ಕದಂಬರು | i. | ಗರುಡ |
| b) | ಗಂಗರು | ii. | ವರಾಹ |
| c) | ಚಾಲುಕ್ಯರು | iii. | ಸಿಂಹ ಮತ್ತು ವಾನರ ಧ್ವಜ |
| d) | ರಾಷ್ಟ್ರಕೂಟರು | iv. | ನಂದಿ |

**(1) a – i, b – ii, c – iii, d – iv**
**(2) a – iv, b – iii, c – ii, d – i**
**(3) a – iii, b – iv, c – ii, d – i**
**(4) a – iii, b – i, c – ii, d – iv**

41. ಕೆಳಗಿನ ಜೋಡಿಗಳಲ್ಲಿ ತಪ್ಪಾಗಿರುವುದನ್ನು ಗುರುತಿಸಿ :

(1) ಗಾಂಧಿ–ಇರ್ವಿನ್ ಒಪ್ಪಂದ – **1931**
(2) ನೆಹರು ವರದಿ – **1928**
(3) ಆಗಸ್ಟ್ ಕೊಡುಗೆ – **1939**
(4) ವೇವೆಲ್ ಯೋಜನೆ – **1945**

**SPACE FOR ROUGH WORK**

SHIKARAT.COM



www.shikarat.com

42. DIPAM ಇದರ ಪೂರ್ಣ ರೂಪ ———.

(1) ಡಿಪಾರ್ಟ್‌ಮೆಂಟ್ ಆಫ್ ಇನ್ವೆಸ್ಟ್‌ಮೆಂಟ್ ಆ್ಯಂಡ್ ಪಬ್ಲಿಕ್ ಅಸೆಟ್ ಮ್ಯಾನೇಜ್‌ಮೆಂಟ್

(2) ಡಿಪಾರ್ಟ್‌ಮೆಂಟ್ ಆಫ್ ಇನ್ನೋವೇಶನ್ ಆ್ಯಂಡ್ ಪಬ್ಲಿಕ್ ಆಕ್ಸೆಸ್ ಮ್ಯಾನೇಜ್‌ಮೆಂಟ್

(3) ಡಿಪಾರ್ಟ್‌ಮೆಂಟ್ ಆಫ್ ಇನ್ವೆಸ್ಟ್‌ಮೆಂಟ್ ಆ್ಯಂಡ್ ಪಬ್ಲಿಕ್ ಏರಿಯಾ ಮ್ಯಾನೇಜ್‌ಮೆಂಟ್

(4) ಡಿಪಾರ್ಟ್‌ಮೆಂಟ್ ಆಫ್ ಇನ್ನೋವೇಶನ್ ಆ್ಯಂಡ್ ಪಾಲಿಸಿ ಆಕ್ಸೆಸ್ ಮ್ಯಾನೇಜ್‌ಮೆಂಟ್

43. KHIR ಸಿಟಿ (ಜ್ಞಾನ ಆರೋಗ್ಯ ಆವಿಷ್ಕಾರಗಳು ಮತ್ತು ಸಂಶೋಧನೆ) ಯನ್ನು ಎಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ?

(1) ಮೈಸೂರು
(2) ಧಾರವಾಡ
(3) ಉಡುಪಿ
(4) ಬೆಂಗಳೂರು

44. ಈ ಕೆಳಕಂಡ ಶೈಕ್ಷಣಿಕ ಯೋಜನೆಗಳು ಮತ್ತು ಅವುಗಳ ಉದ್ದೇಶಗಳನ್ನು ಹೊಂದಿಸಿ ಬರೆಯಿರಿ :

| | |
|---|---|
| a) ನ್ಯಾಷನಲ್ ಮೀನ್ಸ್ ಕಮ್ ಮೆರಿಟ್ ಸ್ಕಾಲರ್‌ಶಿಪ್ ಯೋಜನೆ | i. ಬಾಲಕಿಯರಿಗೆ ತಾಂತ್ರಿಕ ಶಿಕ್ಷಣಕ್ಕಾಗಿ ಸ್ಕಾಲರ್‌ಶಿಪ್ |
| b) ವಿದ್ಯಾಂಜಲಿ | ii. ಉನ್ನತ ಶಿಕ್ಷಣ ಸಂಸ್ಥೆಗಳನ್ನು ಹಳ್ಳಿಗಳು ಮತ್ತು ಸಮಾಜದೊಂದಿಗೆ ಸಂಪರ್ಕಿಸುವುದು |
| c) ಉನ್ನತ ಭಾರತ್ ಅಭಿಯಾನ್ | iii. ಆರ್ಥಿಕವಾಗಿ ಹಿಂದುಳಿದ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡುವುದು |
| d) ಪ್ರಗತಿ | iv. ವಿದ್ಯಾರ್ಥಿಗಳಿಗೆ ಸ್ವಯಂಸೇವೆಯಿಂದ ಪರಿಹಾರ ಬೋಧನಾ ತರಗತಿಗಳು ಹಾಗೂ ತರಬೇತಿ ಕಾರ್ಯಕ್ರಮ |

(1) a – iii, b – iv, c – ii, d – i
(2) a – i, b – ii, c – iv, d – iii
(3) a – ii, b – iii, c – i, d – iv
(4) a – iii, b – i, c – iv, d – ii

45. ಕೇಂದ್ರ ಜಲ ಆಯೋಗ (ಸಿಡಬ್ಲ್ಯೂಸಿ)ವು ಪ್ರಥಮ ಪ್ರವಾಹ ಮುನ್ಸೂಚನಾ ಕೇಂದ್ರವನ್ನು ಸ್ಥಾಪಿಸಿದ ಸ್ಥಳ ______

(1) ಕರ್ನಾಲ್ ಸೇತುವೆ, ಕರ್ನಾಲ್
(2) ತಾಜಿವಾಲಾ ಅಣೆಕಟ್ಟು (Weir), ಯಮುನಾ ನಗರ್
(3) ಹಳೆ ರೈಲ್ವೆ ಸೇತುವೆ, ದೆಹಲಿ
(4) ಹೌರಾ ಸೇತುವೆ, ಕೊಲ್ಕತ್ತಾ

46. ಭಾರತದಲ್ಲಿ ಆರಂಭಿಕ ಉಕ್ಕು ಮತ್ತು ಕಬ್ಬಿಣ ಕೈಗಾರಿಕೆಗಳು ಕಲ್ಲಿದ್ದಲು ಆಧಾರಿತವಾಗಿದ್ದವು. ಇದರಲ್ಲಿ ಒಂದೇ ಅಪವಾದವೆಂದರೆ:

(1) ಕುಲ್ಟಿ
(2) ಜೆಮ್‌ಷೆಡ್‌ಪುರ
(3) ಭದ್ರಾವತಿ
(4) ಬರ್ನಾಪುರ

47. ಈ ಕೆಳಕಂಡ ಪ್ರದೇಶಗಳ ಪೈಕಿ ತೋಡಾ ಬುಡಕಟ್ಟಿನ ಮೂಲ ವಾಸಸ್ಥಾನ ಯಾವುದು?

(1) ಕುಮಾಂವು ಬೆಟ್ಟಗಳು
(2) ನೀಲಗಿರಿ ಬೆಟ್ಟಗಳು
(3) ಖಾಸಿ ಬೆಟ್ಟಗಳು
(4) ಘರ್ವಾಲ್ ಬೆಟ್ಟಗಳು

SPACE FOR ROUGH WORK



www.shikarat.com

48. ಪಟ್ಟಿ I ರಲ್ಲಿರುವ ದೇಶ ಹಾಗೂ ಪಟ್ಟಿ II ರಲ್ಲಿರುವ ಬಂದರು ನಗರಗಳನ್ನು ಹೊಂದಿಸಿರಿ :

| ಪಟ್ಟಿ I (ದೇಶ) | ಪಟ್ಟಿ II (ಬಂದರು ನಗರ) |
|---|---|
| a) ಚೀನಾ | i. ರೊಟರ್‌ಡ್ಯಾಮ್ |
| b) ಈಜಿಪ್ಟ್ | ii. ಶಾಂಘೈ |
| c) ನೆದರ್ಲ್ಯಾಂಡ್ಸ್ | iii. ಅಲೆಕ್ಸಾಂಡ್ರಿಯಾ |
| d) ಯುನೈಟೆಡ್ ಕಿಂಗ್‌ಡಂ | iv. ಲಂಡನ್ |

(1) a – ii, b – i, c – iii, d – iv
(2) a – ii, b – iii, c – i, d – iv
(3) a – ii, b – iii, c – iv, d – i
(4) a – iii, b – ii, c – i, d – iv

49. ಹೊಂದಿಸಿ ಬರೆಯಿರಿ :

| | |
|---|---|
| a) ಪಡುಬಿದ್ರಿ ಬೀಚ್ | i. ಗೋಕರ್ಣ |
| b) ಹಾಫ್‌ಮೂನ್ ಬೀಚ್ | ii. ಉಡುಪಿ |
| c) ದೇವಭಾಗ್ ಬೀಚ್ | iii. ಮಂಗಳೂರು |
| d) ತಣ್ಣೀರು ಬಾವಿ | iv. ಕಾರವಾರ |

(1) a – i, b – ii, c – iii, d – iv
(2) a – i, b – ii, c – iv, d – iii
(3) a – ii, b – i, c – iv, d – iii
(4) a – ii, b – iv, c – iii, d – i

50. ಪ್ರತಿಪಾದನೆ (A) : ರಾಯಚೂರು, ಬಳ್ಳಾರಿ ಮತ್ತು ವಿಜಯನಗರ ಪ್ರದೇಶಗಳು ಹತ್ತಿ ಬೆಳೆಗೆ ಪ್ರಸಿದ್ಧವಾಗಿವೆ.
ಕಾರಣ (R) : ಈ ಪ್ರದೇಶವು ತುಂಗಭದ್ರಾ ಯೋಜನೆಯ ಕಾಲುವೆ ನೀರಾವರಿಯಿಂದ ಸಮೃದ್ಧವಾಗಿದೆ.
ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿರಿ :

(1) ಪ್ರತಿಪಾದನೆ ಮತ್ತು ಕಾರಣ ಎರಡು ಸರಿಯಾಗಿವೆ ಹಾಗೂ ಕಾರಣವು ಪ್ರತಿಪಾದನೆಗೆ ಸರಿಯಾದ ವಿವರಣೆಯಾಗಿದೆ.
(2) ಪ್ರತಿಪಾದನೆ ಮತ್ತು ಕಾರಣ ಎರಡು ಸರಿಯಾಗಿವೆ. ಆದರೆ ಕಾರಣವು ಪ್ರತಿಪಾದನೆಗೆ ಸರಿಯಾದ ವಿವರಣೆಯಲ್ಲ.
(3) ಕಾರಣ ಸರಿಯಾಗಿದೆ. ಆದರೆ ಪ್ರತಿಪಾದನೆ ಸರಿಯಿಲ್ಲ.
(4) ಪ್ರತಿಪಾದನೆ ಮತ್ತು ಕಾರಣ ಎರಡೂ ಸರಿಯಿಲ್ಲ.

51. ಒಬ್ಬ ವ್ಯಕ್ತಿಯು ತನ್ನ ಸಂಬಳದ $\frac{1}{7}$ ಭಾಗವನ್ನು ಆಹಾರಕ್ಕೆ ಖರ್ಚು ಮಾಡುತ್ತಾನೆ, ಉಳಿದ ಸಂಬಳದ $\frac{1}{2}$ ಭಾಗವನ್ನು ಬಟ್ಟೆ ಖರೀದಿಗೆ ಬಳಸುತ್ತಾನೆ ಮತ್ತು ಉಳಿದ ಸಂಬಳದ $\frac{1}{3}$ ಭಾಗವನ್ನು ಮನರಂಜನೆಗೆ ಬಳಸುತ್ತಾನೆ. ಆದರೂ ಕೂಡ ಅವನಲ್ಲಿ ರೂ. 600 ಗಳು ಉಳಿಯುತ್ತದೆ. ಹಾಗಾದರೆ ಮನರಂಜನೆಗೆ ಅವನು ಎಷ್ಟು ಖರ್ಚು ಮಾಡುತ್ತಾನೆ?

(1) ರೂ. 300
(2) ರೂ. 450
(3) ರೂ. 600
(4) ರೂ. 700

SPACE FOR ROUGH WORK

SHIKARAT.COM



www.shikarat.com

52. ರವಿಯು ಶ್ಯಾಮನಿಗಿಂತ ಉದ್ದ ಆದರೆ ಮೋಹನನಿಗಿಂತ ಗಿಡ್ಡವಾಗಿದ್ದಾನೆ. ಶ್ಯಾಮನು ಶಿಲ್ಪಾಳಿಗಿಂತ ಗಿಡ್ಡ ಆದರೆ ಸವಿತಾಳಿಗಿಂತ ಉದ್ದವಾಗಿದ್ದಾನೆ. ರವಿಯು ಸವಿತಾಳಿಗಿಂತ ಉದ್ದವಾಗಿದ್ದಾನೆ. ಹಾಗಾದರೆ ಉದ್ದವಾಗಿರುವ ವ್ಯಕ್ತಿಗಳಲ್ಲಿ 2 ಮತ್ತು 3ನೇ ಸ್ಥಾನದಲ್ಲಿರುವವರು ಯಾರು?

(1) ರವಿ – ಶಿಲ್ಪಾ
(2) ಶಿಲ್ಪಾ – ಶ್ಯಾಮ್
(3) ರವಿ – ಶ್ಯಾಮ್
(4) ರವಿ – ಸವಿತಾ

53. ಒಂದು ಟ್ಯಾಂಕ್‌ಗೆ A, B ಮತ್ತು C ಎಂಬ ಮೂರು ಕೊಳವೆಗಳನ್ನು ಅಳವಡಿಸಲಾಗಿದೆ. A ಮತ್ತು B ಕೊಳವೆಗಳು ಒಟ್ಟಾಗಿ 6 ಗಂಟೆಯಲ್ಲಿ B ಮತ್ತು C ಕೊಳವೆಗಳು 10 ಗಂಟೆಯಲ್ಲಿ, C ಮತ್ತು A ಕೊಳವೆಗಳು 7.5 ಗಂಟೆಯಲ್ಲಿ ಟ್ಯಾಂಕನ್ನು ತುಂಬಿಸುತ್ತವೆ. A ಕೊಳವೆಯಿಂದ ಮಾತ್ರ ಟ್ಯಾಂಕನ್ನು ತುಂಬಿಸಲು ಬೇಕಾಗುವ ಸಮಯ __________

(1) 8 ಗಂಟೆಗಳು
(2) 10 ಗಂಟೆಗಳು
(3) 12 ಗಂಟೆಗಳು
(4) 9 ಗಂಟೆಗಳು


54. ಈ ಕೆಳಕಂಡ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆ ಇರುವ ಸ್ಥಳದಲ್ಲಿ ಯಾವ ಇಂಗ್ಲೀಷ್ ವರ್ಣಮಾಲೆಯ ಅಕ್ಷರ ಬರುತ್ತದೆ?
**A, E, C, G, E, I, ?**

(1) H
(2) E
(3) G
(4) J

55. ಎರಡು ಪತ್ರಿಕೆಗಳನ್ನು ಹೊಂದಿರುವ ಒಂದು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 75% ವಿದ್ಯಾರ್ಥಿಗಳು ಪತ್ರಿಕೆ I ರಲ್ಲಿ ಮತ್ತು 40% ವಿದ್ಯಾರ್ಥಿಗಳು ಪತ್ರಿಕೆ II ರಲ್ಲಿ ಉತ್ತೀರ್ಣರಾಗಿದ್ದಾರೆ. 30% ವಿದ್ಯಾರ್ಥಿಗಳು ಎರಡೂ ಪತ್ರಿಕೆಗಳಲ್ಲಿ ಅನುತ್ತೀರ್ಣರಾಗಿದ್ದಾರೆ. ಹಾಗಾದರೆ, ಪರೀಕ್ಷೆ ತೆಗೆದುಕೊಂಡ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

(1) 1000
(2) 900
(3) 1100
(4) 800

56. ಚಿತ್ರದಲ್ಲಿನ ತ್ರಿಕೋನಗಳ ಸಂಖ್ಯೆಯನ್ನು ಎಣಿಸಿ ಸರಿಯಾದ ಉತ್ತರವನ್ನು ಗುರುತಿಸಿರಿ.



(1) 12
(2) 20
(3) 22
(4) 24

SPACE FOR ROUGH WORK

SHIKARAT.COM



www.shikarat.com

57. $2\sqrt{2}$ ಸೆಂ.ಮೀ. ಉದ್ದದ ಬಾಹುವುಳ್ಳ ಎರಡು ಸಮಬಾಹು ತ್ರಿಭುಜಗಳು ಸೇರಿ ಒಂದು ಚತುರ್ಭುಜವಾಗುತ್ತದೆ. ಆಗ ಉಂಟಾಗುವ ಚತುರ್ಭುಜದ ವಿಸ್ತೀರ್ಣವು

(1) $2\sqrt{3}$ ಚ.ಸೆಂ. ಮೀ
(2) $3\sqrt{3}$ ಚ.ಸೆಂ. ಮೀ
(3) $4\sqrt{3}$ ಚ.ಸೆಂ. ಮೀ
(4) 8 ಚ.ಸೆಂ. ಮೀ

58. × ಅಂದರೆ ÷ ಎಂದಾಗಿ, – ಅಂದರೆ × ಎಂದಾಗಿ, ÷ ಎಂದರೆ + ಎಂದಾಗಿ ಮತ್ತು + ಎಂದರೆ – ಆಗಿದ್ದರೆ, ಆಗ

$$\frac{(3-15\div19)\times8+6}{27\times3-2+16} =$$

(1) 2
(2) 3
(3) 1
(4) 4

59. ಒಬ್ಬ ತಂದೆಯು ತನ್ನ ಮಗನಿಗಿಂತ ಮೂರು ಪಟ್ಟು ಹೆಚ್ಚು ವಯಸ್ಸಿನವರು. ಐದು ವರ್ಷಗಳ ಹಿಂದೆ ಅವರು ತಮ್ಮ ಮಗನಿಗಿಂತ ನಾಲ್ಕು ಪಟ್ಟು ಹೆಚ್ಚು ವಯಸ್ಸಿನವರಾಗಿದ್ದರು. ಮಗನ ಈಗಿನ ವಯಸ್ಸು ಎಷ್ಟು?

(1) 17 ವರ್ಷಗಳು
(2) 15 ವರ್ಷಗಳು
(3) 12 ವರ್ಷಗಳು
(4) 19 ವರ್ಷಗಳು

60. 45 ವಿದ್ಯಾರ್ಥಿಗಳಿರುವ ತರಗತಿಯಲ್ಲಿ ಒಬ್ಬ ಹುಡುಗನು 20 ನೇ ರ‍್ಯಾಂಕ್ ಪಡೆದಿದ್ದಾನೆ. 3 ಹುಡುಗರು ಆ ತರಗತಿಗೆ ಹೊಸದಾಗಿ ಸೇರಿದರೆ ಆ ಹುಡುಗನ ರ‍್ಯಾಂಕ್ 3 ಸ್ಥಾನ ಕೆಳಗೆ ಇಳಿಯುತ್ತದೆ. ಕೆಳಗಿನಿಂದ ಅವನ ಹೊಸ ರ‍್ಯಾಂಕ್ ಎಷ್ಟಾಗಿರುತ್ತದೆ?

(1) 25 ನೇ
(2) 26 ನೇ
(3) 24 ನೇ
(4) 27 ನೇ

61. ಒಂದು ನಿರ್ದಿಷ್ಟ ಸರಳಬಡ್ಡಿ ದರದಲ್ಲಿ ಒಂದು ಮೊತ್ತವು 8 ವರ್ಷಗಳಲ್ಲಿ ದ್ವಿಗುಣಗೊಂಡರೆ, ಎಷ್ಟು ವರ್ಷಗಳಲ್ಲಿ ಆ ಮೊತ್ತವು ನಾಲ್ಕು ಪಟ್ಟು ಆಗುತ್ತದೆ?

(1) 20 ವರ್ಷಗಳು
(2) 22 ವರ್ಷಗಳು
(3) 24 ವರ್ಷಗಳು
(4) 26 ವರ್ಷಗಳು

62. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯು __________ ದ ಪ್ರಮುಖ ಯೋಜನೆಯಾಗಿದೆ.

(1) ಕಾವೇರಿ ನೀರಾವರಿ ನಿಗಮ ನಿಯಮಿತ
(2) ಕರ್ನಾಟಕ ನೀರಾವರಿ ನಿಗಮ ನಿಯಮಿತ
(3) ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(4) ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

63. ದಿ ಸೆಂಟ್ರಲ್ ಸಾಯಿಲ್ ಆ್ಯಂಡ್ ವಾಟರ್ ಕನ್ಸರ್ವೇಶನ್ ರಿಸರ್ಚ್ ಆ್ಯಂಡ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ ಅನ್ನು 1954 ರಲ್ಲಿ ಎಲ್ಲಿ ಸ್ಥಾಪಿಸಲಾಗಿದೆ?

(1) ಬಳ್ಳಾರಿ
(2) ಚಾಮರಾಜನಗರ
(3) ಉಡುಪಿ
(4) ಮಂಡ್ಯ

---

**SPACE FOR ROUGH WORK**

45 - 20
3 17

100 - 8 - 200
200 - 8 = 400
8 ....

SHIKARAT.COM



www.shikarat.com

64. ಕರ್ನಾಟಕದ ಈ ಕೆಳಕಂಡ ಜಿಲ್ಲೆಗಳನ್ನು ಭೌಗೋಳಿಕ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ 2021 ರಲ್ಲಿ ಇದ್ದಂತೆ, ಅತಿ ಚಿಕ್ಕ ಜಿಲ್ಲೆಯಿಂದ ದೊಡ್ಡ ಜಿಲ್ಲೆ ಇರುವಂತೆ ಶ್ರೇಣಿಯಲ್ಲಿ ವ್ಯವಸ್ಥೆ ಮಾಡಿ :

(1) ರಾಮನಗರ, ಕೊಡಗು, ಬೆಂಗಳೂರು ಗ್ರಾಮಾಂತರ, ಬೆಳಗಾವಿ, ತುಮಕೂರು

(2) ಕೊಡಗು, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಬೆಳಗಾವಿ

(3) ರಾಮನಗರ, ಬೆಂಗಳೂರು ಗ್ರಾಮಾಂತರ, ಕೊಡಗು, ತುಮಕೂರು, ಬೆಳಗಾವಿ

(4) ಬೆಂಗಳೂರು ಗ್ರಾಮಾಂತರ, ರಾಮನಗರ, ಕೊಡಗು, ತುಮಕೂರು, ಬೆಳಗಾವಿ

65. ಕರ್ನಾಟಕದ ಬೆಳಗಾವಿ ಕಂದಾಯ ವಿಭಾಗಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಯಾವ ಹೇಳಿಕೆ/ಹೇಳಿಕೆಗಳು ಸರಿಯಿಲ್ಲ?

i ಇದು ಏಳು ಜಿಲ್ಲೆಗಳನ್ನು ಒಳಗೊಂಡಿದೆ.

ii. ಇದನ್ನು ಕಿತ್ತೂರು ಕರ್ನಾಟಕ ಎಂದು ಕೂಡಾ ಕರೆಯುತ್ತಾರೆ.

iii. ಭೌಗೋಳಿಕ ವಿಸ್ತೀರ್ಣಕ್ಕೆ (ಚದರ ಕಿ.ಮೀ. ಗಳಲ್ಲಿ) ಸಂಬಂಧಿಸಿದಂತೆ ರಾಜ್ಯದಲ್ಲೇ ಅತ್ಯಂತ ಸಣ್ಣ ಜಿಲ್ಲೆಯನ್ನು ಇದು ಒಳಗೊಂಡಿದೆ.

ಕೆಳಗೆ ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ :

(1) i ಮತ್ತು ii ನೇ ಹೇಳಿಕೆಗಳು ಸರಿಯಿಲ್ಲ.

(2) ಕೇವಲ ii ನೇ ಹೇಳಿಕೆ ಸರಿಯಿಲ್ಲ.

(3) ಕೇವಲ iii ನೇ ಹೇಳಿಕೆ ಸರಿಯಿಲ್ಲ.

(4) ii ಮತ್ತು iii ನೇ ಹೇಳಿಕೆಗಳು ಸರಿಯಿಲ್ಲ.

66. 2024 ರ ಜೂನ್‌ನಲ್ಲಿ ಯಾರನ್ನು ಜಿ.ಎಸ್.ಟಿ. ದರ ತರ್ಕಬದ್ಧಗೊಳಿಸುವಿಕೆ ಸಮಿತಿಯ ಸಂಚಾಲಕರನ್ನಾಗಿ ನೇಮಿಸಲಾಯಿತು?

(1) ಸಾಮ್ರಾಟ್ ಚೌಧರಿ, ಬಿಹಾರದ ಉಪಮುಖ್ಯಮಂತ್ರಿಗಳು

(2) ಕೃಷ್ಣ ಬೈರೇಗೌಡ, ಕರ್ನಾಟಕದ ಕಂದಾಯ ಸಚಿವರು

(3) ಕೆ.ಎನ್. ಬಾಲಗೋಪಾಲ್, ಕೇರಳದ ಹಣಕಾಸು ಸಚಿವರು

(4) ಚಂದ್ರಿಮಾ ಭಟ್ಟಾಚಾರ್ಯ, ಪಶ್ಚಿಮ ಬಂಗಾಳದ ಹಣಕಾಸು ಸಚಿವರು

67. ಸ್ವತಂತ್ರ ಭಾರತದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಅನುಷ್ಠಾನಗೊಳಿಸಿದ ಭಾರತದ ಪ್ರಥಮ ರಾಜ್ಯ ಯಾವುದು?

(1) ರಾಜಸ್ಥಾನ

(2) ಉತ್ತರಾಖಂಡ

(3) ಗುಜರಾತ್

(4) ಕರ್ನಾಟಕ

68. ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ತಪ್ಪಾಗಿದೆ?

(1) ಲೋಕಸಭೆಯ ಸದಸ್ಯರು ತಮ್ಮ ಸಭಾಪತಿಯನ್ನು ಚುನಾಯಿಸುತ್ತಾರೆ

(2) ರಾಜ್ಯಸಭೆಯ ಸದಸ್ಯರು ತಮ್ಮ ಸಭಾಧ್ಯಕ್ಷರನ್ನು ಚುನಾಯಿಸುತ್ತಾರೆ

(3) ವಿಧಾನಸಭೆಯ ಸದಸ್ಯರು ತಮ್ಮ ಸಭಾಪತಿಯನ್ನು ಚುನಾಯಿಸುತ್ತಾರೆ

(4) ವಿಧಾನಪರಿಷತ್ತಿನ ಸದಸ್ಯರು ತಮ್ಮ ಸಭಾಧ್ಯಕ್ಷರನ್ನು ಚುನಾಯಿಸುತ್ತಾರೆ

SPACE FOR ROUGH WORK

SHIKARAT.COM



www.shikarat.com

69. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗದ ಧ್ಯೇಯ ವಾಕ್ಯ ಯಾವುದು?

(1) ಕೃಷಿ ಮೂಲಂ ಜಗತ್ ಸರ್ವಂ
(2) ನ ಸಮೃದ್ಧಿಃ ಕೃಷಿ ವಿನಾ
(3) ಹೊನ್ನ ಬಿತ್ತೇವು ಹೊಲಕ್ಕೆಲ್ಲ
(4) ಗ್ರಾಮೀಣ ಬೇರು ಜಾಗತಿಕ ಮೇರು

70. ಕೆಳಗಿನ ಸಮಿತಿಗಳಲ್ಲಿ ಯಾವುದರ ಶಿಫಾರಸ್ಸಿನ ಮೇರೆಗೆ ಕೇಂದ್ರ ಜಾಗೃತ ಆಯೋಗವನ್ನು ಸ್ಥಾಪಿಸಲಾಯಿತು?

(1) ಸಂತಾನಮ್ ಸಮಿತಿ
(2) ಕೃಪಲಾನಿ ಸಮಿತಿ
(3) ಗೊರವಾಲಾ ಸಮಿತಿ
(4) ರಂಗರಾಜನ್ ಸಮಿತಿ

71. ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿಯಲ್ಲ?

(1) ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ರಾಜ್ಯಸಭೆಯ ಸದಸ್ಯರನ್ನು ಮಾತ್ರ ಒಳಗೊಂಡಿರುತ್ತದೆ
(2) ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಅತ್ಯಂತ ಹಳೆಯ ಹಣಕಾಸು ಸಮಿತಿ
(3) ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಸದಸ್ಯರ ಅಧಿಕಾರಾವಧಿ ಒಂದು ವರ್ಷ
(4) ಮಂತ್ರಿಯೊಬ್ಬರು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಸದಸ್ಯರಾಗಲು ಅರ್ಹರಲ್ಲ

72. ಈ ಕೆಳಗಿನ ಯಾವ ರಾಸಾಯನಿಕವನ್ನು ಗಾಜಿನ ಶೀಶೆಯಲ್ಲಿ ಶೇಖರಣೆ ಮಾಡಬಾರದು?

(1) ಹೈಡ್ರೋಕ್ಲೋರಿಕ್ ಆಮ್ಲ
(2) ಸಲ್ಫ್ಯೂರಿಕ್ ಆಮ್ಲ
(3) ಹೈಡ್ರೋಫ್ಲೋರಿಕ್ ಆಮ್ಲ
(4) ಟಾರ್‌ಟರಿಕ್ ಆಮ್ಲ

73. ಈ ಕೆಳಗಿನ ರಸಗೊಬ್ಬರಗಳನ್ನು ಪರಿಗಣಿಸಿರಿ.

a) ಯೂರಿಯಾ
b) ಅಮೋನಿಯಂ ನೈಟ್ರೇಟ್
c) ಟ್ರಿಪಲ್ ಸೂಪರ್ ಫಾಸ್ಫೇಟ್
d) ಪೊಟ್ಯಾಷಿಯಂ ಸಲ್ಫೇಟ್

ಈ ಮೇಲಿನ ಯಾವ ರಸಗೊಬ್ಬರ ಸಾರಜನಕಯುಕ್ತ ರಸಗೊಬ್ಬರವಾಗಿದೆ?

(1) a ಮತ್ತು c ಮಾತ್ರ
(2) a ಮತ್ತು b ಮಾತ್ರ
(3) a, b ಮತ್ತು c ಮಾತ್ರ
(4) b, c ಮತ್ತು d ಮಾತ್ರ

SPACE FOR ROUGH WORK

69
72.(1,3)



www.shikarat.com



SHIKARAT.COM

74. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿರಿ.

ಹೇಳಿಕೆ I : ಹಾರ್ಮೋನುಗಳು ಇಂಟರ್ ಸೆಲ್ಯುಲರ್ ಸಂದೇಶವಾಹಕವಾಗಿ ಕಾರ್ಯನಿರ್ವಹಿಸುತ್ತವೆ

ಹೇಳಿಕೆ II : ಹಾರ್ಮೋನುಗಳು ನಮ್ಮ ದೇಹದಲ್ಲಿ ಎಂಡೋಕ್ರೈನ್ ಗ್ಲಾಂಡ್‌ಗಳಲ್ಲಿ ಉತ್ಪತ್ತಿಯಾಗುತ್ತವೆ

ಮೇಲಿನ ಹೇಳಿಕೆಗಳ ಆಧಾರದ ಮೇಲೆ ಸರಿಯಾದ ಉತ್ತರವನ್ನು ಗುರುತಿಸಿ.

(1) ಎರಡು ಹೇಳಿಕೆಗಳು ಸರಿಯಾಗಿವೆ
(2) ಹೇಳಿಕೆ I ಸರಿಯಾಗಿದೆ ಆದರೆ ಹೇಳಿಕೆ II ಸರಿಯಾಗಿಲ್ಲ
(3) ಹೇಳಿಕೆ I ಸರಿಯಾಗಿಲ್ಲ ಆದರೆ ಹೇಳಿಕೆ II ಸರಿಯಾಗಿದೆ
(4) ಹೇಳಿಕೆ I ಮತ್ತು ಹೇಳಿಕೆ II ಸರಿಯಾಗಿಲ್ಲ

75. ಈ ಕೆಳಗೆ ಕೊಟ್ಟಿರುವ ಯಾವ ಜೋಡಿಗಳಲ್ಲಿ ಗಾಜಿನ ವಿಧ ಮತ್ತು ಅದರ ಉಪಯೋಗಗಳು ಸರಿ ಹೊಂದಿರುತ್ತವೆ?

a) ಫ್ಲಿಂಟ್ ಗ್ಲಾಸ್ : ಕ್ಯಾಮರಾ ಮಸೂರಗಳ ತಯಾರಿಕೆಯಲ್ಲಿ

b) ಕ್ರೂಕ್ಸ್ ಗ್ಲಾಸ್ : ಗಾಗಲ್‌ಗಳ ಲೆನ್ಸ್‌ಗಳ ತಯಾರಿಕೆಯಲ್ಲಿ

c) ಸೋಡಾ ಲೈಮ್‌ಗ್ಲಾಸ್ : ರೀಏಜೆಂಟ್ ಬಾಟಲುಗಳ ತಯಾರಿಕೆಯಲ್ಲಿ

(1) b ಮಾತ್ರ
(2) b ಮತ್ತು c ಮಾತ್ರ
(3) a, b ಮತ್ತು c
(4) a ಮತ್ತು c ಮಾತ್ರ

76. ಯಾವ ಹೆಸರಿನ ವಿದ್ಯುತ್‌ಕಾಂತೀಯ ವಿಕಿರಣಗಳನ್ನು ಮ್ಯಾಗ್ನೆಟಿಕ್ ರೆಸೊನೆನ್ಸ್ ಇಮೇಜಿಂಗ್ (MRI) ಸ್ಕ್ಯಾನಿಂಗ್‌ನಲ್ಲಿ ಉಪಯೋಗಿಸುತ್ತಾರೆ?

(1) ನೇರಳಾತೀತ ಕಿರಣಗಳು
(2) ರೇಡಿಯೋ ತರಂಗಗಳು
(3) ಸೂಕ್ಷ್ಮ ತರಂಗಗಳು (ಮೈಕ್ರೋವೇವ್ಸ್)
(4) ಗಾಮಾ ವಿಕಿರಣಗಳು

77. ಈ ಕೆಳಕಂಡ ಯಾವ ಜೋಡಿಗಳು ಸರಿಯಾಗಿ ಹೊಂದಾಣಿಕೆಯಾಗುತ್ತವೆ?

| ಭಾಗ I | | ಭಾಗ II |
|---|---|---|
| a) 243 ನೇ ವಿಧಿ | – | ಗ್ರಾಮ ಸಭಾ |
| b) 243 ಡಿ ವಿಧಿ | – | ಪಂಚಾಯತಿಗಳ ಸ್ಥಾನಗಳಲ್ಲಿ ಮೀಸಲಾತಿ |
| c) 243 ಜಿ ವಿಧಿ | – | ಪಂಚಾಯತ್‌ನ ಅಧಿಕಾರ, ಪ್ರಾಧಿಕಾರ ಮತ್ತು ಜವಾಬ್ದಾರಿಗಳು |
| d) 243 ಜೆ ವಿಧಿ | – | ಪಂಚಾಯತಿಗಳಿಗೆ ಚುನಾವಣೆ |

(1) a ಮತ್ತು b ಮಾತ್ರ
(2) b ಮತ್ತು c ಮಾತ್ರ
(3) c ಮತ್ತು d ಮಾತ್ರ
(4) b ಮತ್ತು d ಮಾತ್ರ

SPACE FOR ROUGH WORK

74



www.shikarat.com

78. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ರ ಮುಖ್ಯ ಉದ್ದೇಶವೇನು?

(1) ಹೆಚ್ಚು ಸ್ವಾಯತ್ತ ಸಹಕಾರಿ ಸಂಘಗಳ ಸ್ಥಾಪನೆಗೆ ಅವಕಾಶ ಕಲ್ಪಿಸುವುದು

(2) ಎಲ್ಲಾ ಗ್ರಾಮೀಣ ಸಹಕಾರಿ ಸಂಘಗಳನ್ನು ವಿಲೀನಗೊಳಿಸುವುದು

(3) ಕೃಷಿ ಸಹಕಾರಿ ಸಂಘಗಳನ್ನು ಮಾತ್ರ ನಿಯಂತ್ರಿಸುವುದು

(4) ನಗರ ಸಹಕಾರಿ ಸಂಘಗಳನ್ನು ಉತ್ತೇಜಿಸುವುದು

79. ಪಂಚಾಯತ್ ಚುನಾವಣೆಯ ಮೇಲುಸ್ತುವಾರಿ ಮಾಡುವ, ನಿರ್ದೇಶನ ನೀಡುವ ಹಾಗೂ ಚುನಾವಣೆಗಳನ್ನು ನಡೆಸುವ ಅಧಿಕಾರ ಯಾರ ಬಳಿ ಇದೆ?

(1) ಭಾರತೀಯ ಚುನಾವಣಾ ಆಯೋಗ

(2) ರಾಜ್ಯ ಮುಖ್ಯ ಚುನಾವಣಾಧಿಕಾರಿಯ ಕಚೇರಿ

(3) ಜಿಲ್ಲಾಡಳಿತ

(4) ರಾಜ್ಯ ಚುನಾವಣಾ ಆಯೋಗ

80. ———— ನಂತರ ಭೂಮಿಯಿಂದ ಚಂದ್ರನ ಹೊಳೆಯುತ್ತಿರುವ ಭಾಗದ ಗೋಚರಿಸುವಿಕೆಯ ಗಾತ್ರವು ಪ್ರತಿದಿನ ————

(1) ಅಮವಾಸ್ಯೆ, ಕಡಿಮೆಯಾಗುತ್ತದೆ

(2) ಅಮವಾಸ್ಯೆ, ಹೆಚ್ಚಾಗುತ್ತದೆ

(3) ಅಮವಾಸ್ಯೆ, ಅದೇ ರೀತಿ ಇರುತ್ತದೆ

(4) ಹುಣ್ಣಿಮೆ, ಹೆಚ್ಚಾಗುತ್ತದೆ

81. ಈ ಕೆಳಗಿನ ಯಾವುದು ಸರಿಯಾದ ಕಾಲಾನುಕ್ರಮದಲ್ಲಿದೆ?

(1) ಲಾರ್ಡ್ ಆಮ್‌ಹರ್ಟ್ಸ್ – ವಿಲಿಯಂ ಬೆಂಟಿಂಕ್ – ಲಾರ್ಡ್ ಆಕ್‌ಲ್ಯಾಂಡ್ – ಲಾರ್ಡ್ ಎಲ್ಲೆನ್‌ಬರೋ

(2) ವಿಲಿಯಂ ಬೆಂಟಿಂಕ್ – ಲಾರ್ಡ್ ಆಮ್‌ಹರ್ಟ್ಸ್ – ಲಾರ್ಡ್ ಆಕ್‌ಲ್ಯಾಂಡ್ – ಲಾರ್ಡ್ ಎಲ್ಲೆನ್‌ಬರೋ

(3) ಲಾರ್ಡ್ ಎಲ್ಲೆನ್‌ಬರೋ – ಲಾರ್ಡ್ ಆಕ್‌ಲ್ಯಾಂಡ್ – ಲಾರ್ಡ್ ಆಮ್‌ಹರ್ಟ್ಸ್ – ವಿಲಿಯಂ ಬೆಂಟಿಂಕ್

(4) ಲಾರ್ಡ್ ಆಮ್‌ಹರ್ಟ್ಸ್ – ಲಾರ್ಡ್ ಆಕ್‌ಲ್ಯಾಂಡ್ – ಲಾರ್ಡ್ ಎಲ್ಲೆನ್‌ಬರೋ – ವಿಲಿಯಂ ಬೆಂಟಿಂಕ್

82. ಭಾರತದ ಸ್ವಾತಂತ್ರ್ಯ ಚಳುವಳಿಯ ಕಾಲದ ಕ್ರಾಂತಿ ಸಂಘಟನೆ HRA ಯ ವಿಸ್ತೃತ ರೂಪ ಯಾವುದು?

(1) ಹಿಂದೂ ರಿಲಿಜನ್ ಅಸೋಸಿಯೇಶನ್

(2) ಹಿಂದೂಸ್ತಾನ್ ರಿಪಬ್ಲಿಕ್ ಅಸೋಸಿಯೇಶನ್

(3) ಹಿಂದೂಸ್ತಾನ್ ರಿಫಾರ್ಮ್ಸ್ ಅಸೋಸಿಯೇಶನ್

(4) ಹಿಂದೂ ರಿಪಬ್ಲಿಕ್ ಅಸೋಸಿಯೇಶನ್

SPACE FOR ROUGH WORK

82(3.2)

SHIKARAT.COM



www.shikarat.com

83. 'ಸತ್ತರಿಯಾ' ನೃತ್ಯ ಪ್ರಕಾರವನ್ನು ಪರಿಚಯಿಸಿದವರು ________ .

(1) ರಾಮ ದೇವ
(2) ಶಂಕರದೇವ
(3) ಬಿರ್ಜು ಮಹಾರಾಜ್
(4) ಮೃಣಾಲ್ ಶುಕ್ಲಾ

84. ಈ ಕೆಳಗಿನ ಯಾವ ಜೋಡಿಯು ಬೆಳಗಾವಿಯಲ್ಲಿ ಮ್ಯಾಜಿನಿ ಕ್ಲಬ್ ಕ್ರಾಂತಿಕಾರಿ ಸಂಘವನ್ನು ಸ್ಥಾಪಿಸಿದರು?

(1) ಗಂಗಾಧರ ರಾವ್ ದೇಶಪಾಂಡೆ – ಆಲೂರು ವೆಂಕಟರಾವ್
(2) ಶ್ರೀನಿವಾಸ ಕೌಜಲಗಿ – ಗೋವಿಂದರಾವ್ ಯಾಳಗಿ
(3) ಗೋವಿಂದರಾವ್ ಯಾಳಗಿ – ಹನುಮಂತರಾವ್ ದೇಶಪಾಂಡೆ
(4) ಹನುಮಂತರಾವ್ ದೇಶಪಾಂಡೆ – ಗಂಗಾಧರರಾವ್ ದೇಶಪಾಂಡೆ

85. ಈ ಕೆಳಗಿನ ಹೇಳಿಕೆಗಳಲ್ಲಿ ಗುಪ್ತರ ಕುರಿತಾದ ತಪ್ಪಾದ ಹೇಳಿಕೆಯನ್ನು ಆಯ್ಕೆ ಮಾಡಿರಿ.

(1) ಒಂದನೇ ಚಂದ್ರಗುಪ್ತನು ಲಿಚ್ಛವಿಯ ಯುವರಾಣಿಯನ್ನು ಮದುವೆಯಾಗಿ ತನ್ನ ರಾಜ್ಯದ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡನು
(2) ಸಾ.ಶ. 320 ರಲ್ಲಿ 'ಗುಪ್ತಶಕೆ' ಯನ್ನು ಸಮುದ್ರಗುಪ್ತನು ಪ್ರಾರಂಭಿಸಿದನು
(3) ಸಮುದ್ರಗುಪ್ತನು ಶ್ರೇಷ್ಠ ಕವಿ ಹಾಗೂ ಸಂಗೀತಪ್ರಿಯನೂ ಆಗಿದ್ದನು
(4) ಎರಡನೇ ಚಂದ್ರಗುಪ್ತನು 'ವಿಕ್ರಮಾದಿತ್ಯ' ಎಂಬ ಬಿರುದನ್ನು ಪಡೆದಿದ್ದನು

86. ಈ ಕೆಳಗಿನವುಗಳಲ್ಲಿ ಕೃತಿ ಮತ್ತು ಅದರ ರಚನೆಕಾರರ ಕುರಿತಾದ ತಪ್ಪಾದ ಜೋಡಿಯನ್ನು ಆಯ್ಕೆ ಮಾಡಿರಿ.

(1) ಭಾರವಿ – ಕಿರಾತಾರ್ಜುನೀಯ
(2) ದಂಡಿ – ದಶಕುಮಾರ ಚರಿತ
(3) ಧರ್ಮಪಾಲ – ಮತ್ತವಿಲಾಸ ಪ್ರಹಸನ
(4) ಶಿವ ಭಟ್ಟಾರಕ – ಹರ ಪಾರ್ವತೀಯ

87. ಪ್ರತಿಪಾದನೆ (A) : ಇಲ್ತುಮಿಶನು ದೆಹಲಿಯ ಸುಲ್ತಾನರ ಮನೆತನದ ನಿಜವಾದ ಸ್ಥಾಪಕ

ಕಾರಣ (R) : ಇಲ್ತುಮಿಶನು ಕುತುಬ್ದ್ದೀನ್ ಐಬಕ್‌ನ ಮಗನಾಗಿದ್ದನು

ಈ ಮೇಲ್ಕಂಡ ಹೇಳಿಕೆಗಳನ್ನು ಕುರಿತು ಈ ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ :

(1) ಈ ಮೇಲಿನ ಎರಡೂ ಹೇಳಿಕೆಗಳು ಸರಿಯಾಗಿವೆ ಹಾಗೂ A ಯನ್ನು R ಸಮರ್ಥಿಸುತ್ತದೆ.
(2) ಈ ಮೇಲಿನ ಎರಡೂ ಹೇಳಿಕೆಗಳು ಸರಿಯಾಗಿವೆ, ಆದರೆ A ಯನ್ನು R ಸಮರ್ಥಿಸುವುದಿಲ್ಲ
(3) A ಸರಿಯಾಗಿದೆ ಆದರೆ R ತಪ್ಪಾಗಿದೆ.
(4) R ಸರಿಯಾಗಿದೆ A ತಪ್ಪಾಗಿದೆ

SPACE FOR ROUGH WORK

87(3)



www.shikarat.com

88. ಒಂದು ಮಗು ಆರ್‌ಎಚ್ ಅಂಶ (Rh factor) ಹೊಂದಾಣಿಕೆಯಾಗದ ಕಾರಣ ರಕ್ತಹೀನತೆ ಮತ್ತು ಕಾಮಾಲೆಯಿಂದ ಬಳಲುತ್ತದೆ. ಅಂತಹ ಪರಿಸ್ಥಿತಿ ಯಾವಾಗ ಎದುರಾಗುತ್ತದೆ?

(1) 'ಎ' ರಕ್ತದ ಗುಂಪಿನ ಮಹಿಳೆ 'ಬಿ' ರಕ್ತದ ಗುಂಪಿನ ಪುರುಷನೊಂದಿಗೆ ವಿವಾಹವಾದಾಗ

(2) ಆರ್‌ಎಚ್ ಪಾಸಿಟಿವ್ ರಕ್ತದ ಗುಂಪಿನ ಮಹಿಳೆ, ಆರ್‌ಎಚ್ ನೆಗೆಟಿವ್ ಪುರುಷನೊಂದಿಗೆ ವಿವಾಹವಾದಾಗ

(3) ಆರ್‌ಎಚ್ ನೆಗೆಟಿವ್ ರಕ್ತದ ಗುಂಪಿನ ಮಹಿಳೆ, ಆರ್‌ಎಚ್ ಪಾಸಿಟಿವ್ ಪುರುಷನೊಂದಿಗೆ ವಿವಾಹವಾದಾಗ

(4) ಒ (O) ರಕ್ತದ ಗುಂಪಿನ ಪುರುಷ, ಒ (O) ಗುಂಪಿನ ಮಹಿಳೆಯೊಂದಿಗೆ ವಿವಾಹವಾದಾಗ

89. ಎರಡು ಗಾಳಿ ತುಂಬಿದ ಬಲೂನ್‌ಗಳನ್ನು ಪರಸ್ಪರ ಉಣ್ಣೆ ಬಟ್ಟೆಯಿಂದ ಉಜ್ಜಿ ಚಾರ್ಜ್ ಮಾಡಿದ ಬಳಿಕ ಆ ಬಲೂನ್‌ಗಳನ್ನು ಪರಸ್ಪರ ಸನಿಹಕ್ಕೆ ತಂದರೆ :

(1) ಅವುಗಳ ಚಾರ್ಜ್‌ಗಳು ಸದೃಶವಾಗಿರುವುದರಿಂದ, ಅವು ಪರಸ್ಪರ ಆಕರ್ಷಿಸುತ್ತವೆ

(2) ಅವುಗಳ ಚಾರ್ಜ್‌ಗಳು ವಿಭಿನ್ನವಾಗಿರುವುದರಿಂದ, ಅವು ಪರಸ್ಪರ ಆಕರ್ಷಿಸುತ್ತವೆ

(3) ಅವುಗಳ ಚಾರ್ಜ್‌ಗಳು ಸದೃಶವಾಗಿರುವುದರಿಂದ, ಅವು ಪರಸ್ಪರ ವಿಕರ್ಷಿಸುತ್ತವೆ

(4) ಅವುಗಳ ಚಾರ್ಜ್‌ಗಳು ವಿಭಿನ್ನವಾಗಿರುವುದರಿಂದ, ಅವು ಪರಸ್ಪರ ವಿಕರ್ಷಿಸುತ್ತವೆ

90. ಪಟ್ಟಿ A ಯಲ್ಲಿ ನೀಡಲಾಗಿರುವ ಉಪಕರಣಗಳನ್ನು ಪಟ್ಟಿ B ಯಲ್ಲಿರುವ ಬಳಸುವಿಕೆಯೊಂದಿಗೆ ಹೊಂದಿಸಿ ಬರೆಯಿರಿ :

| ಪಟ್ಟಿ A | ಪಟ್ಟಿ B |
|---|---|
| a) ಸ್ಪ್ರಿಂಗ್ ಬ್ಯಾಲೆನ್ಸ್ | i. ಚಾರ್ಜ್ ಗುರುತಿಸಲು ಬಳಸಲಾಗುತ್ತದೆ |
| b) ಅಮ್ಮೀಟರ್ | ii. ಭೂಕಂಪದ ಸಾಮರ್ಥ್ಯವನ್ನು ಮಾಪನ ಮಾಡಲು ಬಳಸಲಾಗುತ್ತದೆ |
| c) ಎಲೆಕ್ಟ್ರೋಸ್ಕೋಪ್ | iii. ವಿದ್ಯುತ್ ಪ್ರವಾಹವನ್ನು ಮಾಪನ ಮಾಡಲು ಬಳಸಲಾಗುತ್ತದೆ |
| d) ಸಿಸ್ಮೋಗ್ರಾಫ್ | iv. ಬಲ (force) ವನ್ನು ಮಾಪನ ಮಾಡಲು ಬಳಸಲಾಗುತ್ತದೆ |

(1) a – ii, b – iv, c – i, d – iii
(2) a – iv, b – iii, c – i, d – ii
(3) a – iii, b – iv, c – ii, d – i
(4) a – iv, b – i, c – iii, d – ii

91. ಎಣ್ಣೆ ಮತ್ತು ಕೊಬ್ಬಿನಲ್ಲಿ ಚಿಪ್ಸ್‌ನಂತಹ ವಸ್ತುಗಳನ್ನು ಕರಿದು, ಕೆಲ ಸಮಯ ಕಾಲ ಗಾಳಿಯ ತೇವಾಂಶಕ್ಕೆ ತೆರೆದಿಟ್ಟರೆ, ಎಣ್ಣೆ ಮತ್ತು ಕೊಬ್ಬು ಕಮಟುಗೊಂಡು ಚಿಪ್ಸ್ ಕೆಟ್ಟ ವಾಸನೆ ಬರಲು ಆರಂಭವಾಗುತ್ತದೆ. ಇದನ್ನು ತಪ್ಪಿಸಲು ಎಣ್ಣೆಯಲ್ಲಿ ಕರಿದ ಚಿಪ್ಸ್‌ನಂತಹ ವಸ್ತುಗಳನ್ನು ಬ್ಯಾಗ್‌ನಲ್ಲಿ ಒಂದು ಜಡ ಅನಿಲವನ್ನು ತುಂಬಿ ಪ್ಯಾಕ್ ಮಾಡಲಾಗುತ್ತದೆ. ಆ ಜಡ ಅನಿಲ ಸಾಮಾನ್ಯವಾಗಿ _________ ಆಗಿರುತ್ತದೆ.

(1) $O_2$
(2) $N_2$
(3) $Cl_2$
(4) $H_2$

92. ಮುದ್ರಾ ಯೋಜನೆಯಡಿ ಲಭ್ಯವಿರುವ ಮೂರು ಸಾಲದ ವಿಭಾಗಗಳು _________

(1) ಶಿಶು, ಕಿಶೋರ್, ಉತ್ತಮ್
(2) ಸುವಿಧ್, ಉತ್ತಮ್, ಕಿಶೋರ್
(3) ಶಿಶು, ಕಿಶೋರ್, ತರುಣ್
(4) ಉತ್ತಮ್, ತರುಣ್, ಸುವಿಧ್

SPACE FOR ROUGH WORK


www.shikarat.com

93. ಹೊಂದಿಸಿ ಬರೆಯಿರಿ :

| ಸಂಸ್ಥೆ | ಕೇಂದ್ರ ಸ್ಥಾನ |
|---|---|
| a) ಬಿಐಎಂಎಸ್‌ಟಿಇಸಿ (BIMSTEC) | i. ಮನಿಲಾ |
| b) ಐಎಂಎಫ್ | ii. ಢಾಕಾ |
| c) ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ | iii. ವಾಷಿಂಗ್ಟನ್ ಡಿಸಿ |
| d) ಡಬ್ಲ್ಯೂಎಚ್‌ಒ (WHO) | iv. ಜಿನೇವಾ |

(1) a – ii, b – iii, c – i, d – iv
(2) a – ii, b – iii, c – iv, d – i
(3) a – iv, b – ii, c – iii, d – i
(4) a – i, b – iii, c – ii, d – iv

94. ಭಾರತದ ಮೊದಲ ಪೇಮೆಂಟ್ಸ್ ಬ್ಯಾಂಕ್ :

(1) ಫಿನೋ ಪೇಮೆಂಟ್ಸ್ ಬ್ಯಾಂಕ್
(2) ಏರಟೆಲ್ ಪೇಮೆಂಟ್ಸ್ ಬ್ಯಾಂಕ್
(3) ಪೇಟಿಎಂ ಪೇಮೆಂಟ್ಸ್ ಬ್ಯಾಂಕ್
(4) ಜಿಯೋ ಪೇಮೆಂಟ್ಸ್ ಬ್ಯಾಂಕ್

95. ಈ ಕೆಳಗಿನವುಗಳಲ್ಲಿ ದ್ರಾವಿಡಿಯನ್ ಗುಂಪಿಗೆ ಸೇರಿದ ಭಾಷೆ/ಭಾಷೆಗಳು ಯಾವುದು/ಯಾವುವು?

a) ಕುರುಖ್

b) ಮಾಲ್ತೋ

c) ಕೊಲಾಮಿ

d) ಪರ್ಜಿ

ಕೆಳಕಂಡ ಆಯ್ಕೆಗಳಿಂದ ಸರಿ ಉತ್ತರವನ್ನು ಆರಿಸಿರಿ :

(1) d ಮಾತ್ರ ಸರಿ
(2) c ಮತ್ತು d ಮಾತ್ರ ಸರಿ
(3) a ಮತ್ತು b ಮಾತ್ರ ಸರಿ
(4) a, b, c ಮತ್ತು d ಸರಿಯಾಗಿವೆ

96. ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ :

a) ವಾಯುಗುಣಮಟ್ಟ ಮಾನದಂಡಕ್ಕೆ ಸಂಬಂಧಿಸಿದಂತೆ ಭಾರತದಲ್ಲಿ ಕೈಗಾರಿಕೆ, ವಸತಿ ಪ್ರದೇಶ ಮತ್ತು ಸೂಕ್ಷ್ಮ ಪ್ರದೇಶಗಳಿಗೆ ಪ್ರತ್ಯೇಕ ಮಾನದಂಡಗಳಿವೆ.

b) ವಿಶ್ವ ಆರೋಗ್ಯ ಸಂಸ್ಥೆಯ (WHO) ಮಾರ್ಗಸೂಚಿಗಳು ಎಲ್ಲಾ ಭೂಬಳಕೆ ಪ್ರದೇಶಗಳಿಗೆ ಏಕರೂಪವಾಗಿವೆ.

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ಸರಿಯಾಗಿವೆ?

(1) a ಮಾತ್ರ
(2) b ಮಾತ್ರ
(3) a ಮತ್ತು b ಎರಡೂ
(4) a ಮತ್ತು b ಎರಡೂ ಅಲ್ಲ

SPACE FOR ROUGH WORK

SHIKARAT.COM


www.shikarat.com

97. ಕರ್ನಾಟಕದಲ್ಲಿ ರೈಲ್ವೇಗೆ ಸಂಬಂಧಿಸಿದಂತೆ ಈ ಕೆಳಕಂಡ ಯಾವ ಹೇಳಿಕೆಗಳು ಸರಿಯಿಲ್ಲ ?

(1) ಹುಬ್ಬಳ್ಳಿ ವಿಭಾಗವನ್ನು ಬೆಂಗಳೂರು ಮತ್ತು ಮೈಸೂರು ವಿಭಾಗಗಳನ್ನು ಸೇರಿಸಿ ನೈರುತ್ಯ ರೈಲ್ವೇ ವಿಭಾಗವನ್ನು ರಚಿಸಲಾಗಿದೆ.

(2) ಕೊಂಕಣ ರೈಲ್ವೇಯಲ್ಲಿ ಪ್ರಥಮ ಪ್ರಯಾಣಿಕರ ರೈಲು 1993 ರಲ್ಲಿ ಮಂಗಳೂರು ಮತ್ತು ಕಾರವಾರದ ನಡುವೆ ಸಂಚರಿಸಿತು.

(3) 2016 ರಲ್ಲಿ ಬೆಂಗಳೂರು ನಗರ ರೈಲು ನಿಲ್ದಾಣವನ್ನು 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೇ ನಿಲ್ದಾಣ' ಎಂದು ಮರುನಾಮಕರಣ ಮಾಡಲಾಯಿತು.

(4) ರಾಜ್ಯದಲ್ಲಿ ಪ್ರಥಮ ರೈಲ್ವೇ ಮಾರ್ಗ ಬೆಂಗಳೂರಿನಿಂದ-ಮದ್ರಾಸ್‌ವರೆಗಿದ್ದು, ಅದನ್ನು 1864 ರಲ್ಲಿ ಆರಂಭಿಸಲಾಯಿತು.

98. ಕರ್ನಾಟಕ ರಾಜ್ಯದ ಪ್ರವಾಸ ಇಲಾಖೆಗೆ ಸಂಬಂಧಿಸಿದ ಈ ಕೆಳಗಿನ ಯಾವ ಘೋಷವಾಕ್ಯ ಸರಿಯಾಗಿದೆ?

(1) ಒಂದು ರಾಜ್ಯ ಅನೇಕ ಪ್ರಪಂಚಗಳು
(2) ಒಂದು ರಾಜ್ಯ ಅನೇಕ ದೇಶಗಳು
(3) ಒಂದು ಪ್ರಪಂಚ ಅನೇಕ ರಾಜ್ಯಗಳು
(4) ಒಂದು ದೇಶ ಅನೇಕ ಪ್ರಪಂಚಗಳು

99. ನಾಗರಿಕರು ತಮ್ಮ ಭೂಮಿಗೆ ಸಂಬಂಧಿಸಿದ ದಾಖಲೆಗಳು ಹಾಗೂ ವಹಿವಾಟುಗಳನ್ನು ಕರ್ನಾಟಕ ರಾಜ್ಯ ಕಂದಾಯ ಇಲಾಖೆಯ ಯಾವ ಪೋರ್ಟಲ್‌ನಲ್ಲಿ ನೋಡಬಹುದಾಗಿದೆ?

(1) ಪರಿಹಾರ
(2) ಭೂಮಿ
(3) ಕಾವೇರಿ
(4) ಪಹಣಿ ಆನ್‌ಲೈನ್

100. ಈ ಕೆಳಗಿನವರಲ್ಲಿ ದೀರ್ಘಾವಧಿಯವರೆಗೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ದಾಖಲೆ ಯಾರ ಹೆಸರಿನಲ್ಲಿದೆ?

(1) ದಾದಾಬಾಯಿ ನವರೋಜಿ
(2) ಸುರೇಂದ್ರನಾಥ ಬ್ಯಾನರ್ಜಿ
(3) ರಾಶ್ ಬಿಹಾರಿ ಘೋಷ್
(4) ಡಬ್ಲ್ಯೂ.ಸಿ. ಬ್ಯಾನರ್ಜಿ

SHIKARAT.COM

SPACE FOR ROUGH WORK



www.shikarat.com